ವಿಜಯಪುರ | ಸಂಪುಟ 01 | ಸಂಚಿಕೆ 254 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಶನಿವಾರ, ಡಿಸೆಂಬರ್ 02, 2023



“ವಿಜಯಪುರ ಜಿಲ್ಲೆಯಾದ್ಯಂತ ಬರ ಪರಿಸ್ಥಿತಿ ಇರುವುದರಿಂದ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು. ಕೆಲಸ ಬಯಸಿ ಬರುವ ಕೂಲಿಕಾರರಿಗೆ ಕೆಲಸ ನೀಡಲು ವಿಫಲರಾದಲ್ಲಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು.”

ಉದಯರಶ್ಮಿ ದಿನಪತ್ರಿಕೆ

– ರಾಹುಲ್ ಶಿಂಧೆ

ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

### ವಿದ್ಯಾರ್ಥಿಗಳು ಸುರಕ್ಷಿತವಾಗಿ ಮನೆಗೆ ವಾಪಸ್ | ಆತಂಕಗೊಂಡ ಪೋಷಕರು | ಡಿಸಿಎಂ ಭೇಟಿ

# ಬೆಂಗಳೂರಿನ ಶಾಲೆಗಳಿಗೆ ಹುಸಿ ಬಾಂಬ್ ಬೆದರಿಕೆ!

ಬೆಂಗಳೂರು: ಬೆಂಗಳೂರಿನ ಅರವತ್ತು ಖಾಸಗಿ ಶಾಲೆಗಳಿಗೆ ಶುಕ್ರವಾರ ಬೆಳಗ್ಗೆ ಬಾಂಬ್ ಬೆದರಿಕೆ ಇರುವ ಇಮೇಲ್ ಬಂದಿದ್ದು, ಸಿಬ್ಬಂದಿ ಮತ್ತು ಪೋಷಕರಲ್ಲಿ ಭಯ ಹುಟ್ಟಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಲಾ ಸಿಬ್ಬಂದಿ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದು, ಬಾಂಬ್ ನಿಷ್ಕ್ರಿಯ ದಳದೊಂದಿಗೆ ಶಾಲೆಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಪೊಲೀಸರು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯನ್ನು ತಕ್ಷಣವೇ ಶಾಲೆಯ ಆವರಣದಿಂದ ಹೊರಗೆ ಕಳುಹಿಸಿ, ತೀವ್ರ ತಪಾಸಣೆ ನಡೆಸಿದರು. ಆದರೆ ಯಾವುದೇ ಅನುಮಾನಾಸ್ಪದ ವಸ್ತುಗಳು ಇನ್ನೂ ಪತ್ತೆಯಾಗಿಲ್ಲ ಮತ್ತು ಪ್ರಾಥಮಿಕ ತನಿಖೆಯಿಂದ ಇದು ಹುಸಿ ಬಾಂಬ್ ಸಂದೇಶ ಎಂದು ತಿಳಿದು ಬಂದಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

“ಇದುವರೆಗೆ ಬೆಂಗಳೂರಿನ 60 ಶಾಲೆಗಳಿಗೆ ಬಾಂಬ್ ಬೆದರಿಕೆಯ ಬಗ್ಗೆ ಇಮೇಲ್ ಬಂದಿದೆ. ಬಾಂಬ್ ಬೆದರಿಕೆಯ ಬಗ್ಗೆ ಇಮೇಲ್ ಐಡಿಯಿಂದ ಸಂದೇಶವನ್ನು ಸ್ವೀಕರಿಸಲಾಗಿದೆ. ಶೋಧ ಕಾರ್ಯಾಚರಣೆ ಬಹುತೇಕ ಮುಗಿದಿದೆ ಮತ್ತು ಇಲ್ಲಿಯವರೆಗೆ, ನಮ್ಮ ತಂಡಗಳಿಗೆ ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ. ಇದು ಹುಸಿ ಬಾಂಬ್ ಸಂದೇಶದಂತೆ ತೋರುತ್ತಿದೆ. ನಾವು ಕೂಡ ಈ ಬಗ್ಗೆ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ಸಂಪೂರ್ಣ ತನಿಖೆ ನಡೆಸಲಾಗುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಇಮೇಲ್ ಬೆದರಿಕೆಯ ನಂತರ ಮಕ್ಕಳನ್ನು ಸುರಕ್ಷಿತವಾಗಿ ಮನೆಗೆ ಕಳುಹಿಸಲಾಗಿದೆ. ಆತಂಕಗೊಂಡ ಪೋಷಕರು ಭಯಭೀತರಾಗಿ ತಮ್ಮ ಕಚೇರಿ ಮತ್ತು ಮನೆಗಳಿಂದ ಶಾಲೆಗಳಿಗೆ ಧಾವಿಸಿ, ಮಕ್ಕಳನ್ನು ಮನೆಗೆ ಕರೆದುಕೊಂಡು ಹೋಗಿದ್ದಾರೆ.

“ಶಾಲಾ ಆವರಣದಲ್ಲಿ ಸ್ಫೋಟಕಗಳನ್ನು ಇರಿಸಲಾಗಿದೆ ಎಂದು ಇಮೇಲ್ ನಲ್ಲಿ ತಿಳಿಸಲಾಗಿದೆ.. ಈ ಬಗ್ಗೆ ನಾವು ಕಮಾಂಡ್ ಸೆಂಟರ್‌ನಿಂದ ಕರೆ ಸ್ವೀಕರಿಸಿದ್ದೇವೆ ಮತ್ತು ತಕ್ಷಣವೇ ನಮ್ಮ ತಂಡಗಳನ್ನು ನಗರದ ವಿವಿಧ ಭಾಗಗಳಲ್ಲಿ ಇರುವ ಶಾಲೆಗಳಿಗೆ ಕಳುಹಿಸಿದ್ದೇವೆ. ಎಲ್ಲಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯನ್ನು ಶಾಲೆಯ ಆವರಣದಿಂದ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಸಂಪೂರ್ಣ ಶೋಧ ಕಾರ್ಯಾಚರಣೆ ನಡೆಸಲಾಯಿತು,” ಎಂದು ಮತ್ತೊಬ್ಬ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

“ಈ ಹಿಂದೆಯೂ ಇದೇ ರೀತಿಯ ಬೆದರಿಕೆ ಪತ್ರಗಳು ಮತ್ತು ಇಮೇಲ್‌ಗಳು ಶಾಲೆಗಳಿಗೆ ಬಂದಿದ್ದವು. ಇದು ಕಿಡಿಗೇಡಿತನದ ಕೃತ್ಯ ಎಂದು ಕಂಡುಬಂದಿದೆ. ಪೊಲೀಸರು ಇದರ ಹಿಂದೆ ಇರುವವರನ್ನು ಗುರುತಿಸಿದ್ದಾರೆ. ಪೊಲೀಸರು ಇಂದಿನ ಮೇಲ್‌ಗಳನ್ನು ಸಹ ಪರಿಶೀಲಿಸುತ್ತಿದ್ದಾರೆ. ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಎಲ್ಲಾ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಬಿ ದಯಾನಂದ ಅವರು ಹೇಳಿದ್ದಾರೆ.

ಇವೆಲ್ಲವೂ ಹುಸಿ ಬಾಂಬ್ ಬೆದರಿಕೆ ಮೇಲ್‌ಗಳು, ಜನ ಆತಂಕಪಡುವ ಅಗತ್ಯ ಇಲ್ಲ ಎಂದು ಅವರು ತಿಳಿಸಿದ್ದಾರೆ.

ಕಳೆದ ವರ್ಷವೂ ಕೆಲವು ದುಷ್ಕರ್ಮಿಗಳು ಬೆಂಗಳೂರಿನ ಶಾಲೆಗಳಿಗೆ ಬಾಂಬ್ ಬೆದರಿಕೆಯ ಕುರಿತು ಇಂತಹ ಇಮೇಲ್‌ಗಳನ್ನು ಕಳುಹಿಸಿದ್ದರು, ನಂತರ ಅದು ಹುಸಿ ಸಂದೇಶವಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಇನ್ನು ಬಾಂಬ್ ಬೆದರಿಕೆ ಇರುವ ಶಾಲೆಯೊಂದಕ್ಕೆ ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಭೇಟಿ ನೀಡಿದ್ದು, ಅಲ್ಲಿನ ಪರಿಸ್ಥಿತಿ ಕುರಿತು ಶಾಲೆ ಸಿಬ್ಬಂದಿ ಹಾಗೂ ಪೊಲೀಸರಿಂದ ಮಾಹಿತಿ ಪಡೆದರು.

“ನನಗೆ ತಿಳಿದಿರುವ ಕೆಲವು ಶಾಲೆಗಳು ಮತ್ತು ನನ್ನ ಮನೆಯ ಸಮೀಪವಿರುವ ಶಾಲೆಗಳಿಗೆ ಬಾಂಬ್ ಬೆದರಿಕೆ ಇರುವ ಸುದ್ದಿಯನ್ನು ಟಿವಿಯಲ್ಲಿ ನೋಡಿದ ನಂತರ ನಾನು ಸ್ವಲ್ಪ ಆತಂಕಗೊಂಡೆ. ಹಾಗಾಗಿ ಪರಿಶೀಲಿಸಲು ಶಾಲೆಗೆ ಹೋದೆ. ಪೊಲೀಸರು ನನಗೆ ಮೇಲ್ ತೋರಿಸಿದ್ದಾರೆ. ಮೇಲ್ನೋಟಕ್ಕೆ ಅದು ನಕಲಿ ಎಂದು ತೋರುತ್ತಿದೆ. ಆದರೆ ನಾವು ಜಾಗರೂಕರಾಗಿರಬೇಕು. ಪೋಷಕರು ಸ್ವಲ್ಪ ಆತಂಕಕ್ಕೊಳಗಾಗಿದ್ದಾರೆ. ಆದರೆ ಚಿಂತಿಸಬೇಕಾಗಿಲ್ಲ. ಪೊಲೀಸರು ಅದನ್ನು ಪರಿಶೀಲಿಸುತ್ತಿದ್ದಾರೆ” ಎಂದು ಡಿಸಿಎಂ ಹೇಳಿದ್ದಾರೆ.

### ರಾಜ ನುಡಿ

ಕಳೆದುಕೊಂಡಿದ್ದೀವಿ ಅಂತಾ ಅಳೋದಕ್ಕೆ ಜೊತೆ ಹೊತ್ತು ತಂದಿದ್ದಾದರೂ ಏನು! ಪಡೆದಿದ್ದೇವೆ ಅಂತಾ ಖುಷಿ ಪಡೋಕೆ ಹೊತ್ತು ಒಯ್ಯೋದಾದರೂ ಏನು! ಎಷ್ಟು ದಕ್ಕಿದೆ ಅಷ್ಟೇ ಬದುಕು. ಶಬ್ದದಲಿ ಸೀಮಿತವಾಗಿದ್ದರೂ ಅರ್ಥದಲಿ ವಿಸ್ತ್ರತವಾಗಿ ಬದುಕೋಣ..

–ಡಾ. ರಾಜಶೇಖರ ನಾಗೂರ

### ಸಚಿವ ಎಂ. ಬಿ. ಪಾಟೀಲ ಪುತ್ರ ಹಾಗೂ ಬಿ.ಎಲ್.ಡಿ.ಇ ಸಂಸ್ಥೆ ನಿರ್ದೇಶಕ ಬಸನಗೌಡರ ವಿವಾಹ ಆರತಕ್ಷತೆ

# 250 ಸ್ವಾಮೀಜಿಗಳ ಸಾನಿಧ್ಯದಲ್ಲಿ ವೈಭವೋಪೇತ ಆರತಕ್ಷತೆ

ಉದಯರಶ್ಮಿ ನ್ಯೂಸ್

ವಿಜಯಪುರ: ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ. ಬಿ. ಪಾಟೀಲ ಮತ್ತು ಆಶಾ ಎಂ. ಪಾಟೀಲ ದಂಪತಿಯ ಹಿರಿಯ ಪುತ್ರ ಹಾಗೂ ಬಿ.ಎಲ್.ಡಿ.ಇ ಸಂಸ್ಥೆ ನಿರ್ದೇಶಕ ಬಸನಗೌಡ ಪಾಟೀಲ ಹಾಗೂ ಹಿರಿಯ ಶಾಸಕ ಡಾ. ಶ್ಯಾಮನೂರು ಶಿವಶಂಕರಪ್ಪ ಅವರ ಮೊಮ್ಮಗಳಾದ ಅಖಿಲಾ ಅವರ ವಿವಾಹ ಆರತಕ್ಷತೆ ಕಾರ್ಯಕ್ರಮ ನಾಡಿನ ನಾನಾ ಕಡೆಗಳಿಂದ ಆಗಮಿಸಿದ್ದ ಸುಮಾರು 250 ಸ್ವಾಮೀಜಿಗಳ ಸಾನಿಧ್ಯದಲ್ಲಿ ಇಂದು ಶುಕ್ರವಾರ ನಗರದಲ್ಲಿ ನಡೆಯಿತು.

ಗದಗ ತೋಂಟದಾರ್ಯ ಮಠದ ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮೀಜಿ, ಸಿರಿಗೆರೆ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ, ಮೂರು ಸಾವಿರ ಮಠದ ಶ್ರೀ ಗುರುಸಿದ್ಧ ರಾಜಯೋಗಿಂದ್ರ ಮಹಾಸ್ವಾಮೀಜಿಗಳು, ಕಾಶಿಯ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿಗಳು, ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ, ಉಜ್ಜಯಿನಿ ಜಗದ್ಗುರು ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ, ವೋಟಗಿ ಡಾ. ಚನ್ನಬಸವ ಮಹಾಸ್ವಾಮೀಜಿ, ಧಾರವಾಡ ಮುರಘಾಮಠದ ಮಲ್ಲಿಕಾರ್ಜುನ ಮಹಾಸ್ವಾಮೀಜಿ, ಶಿರಹಟ್ಟಿ ಶ್ರೀ ದಿಂಗಾಲೇಶ್ವರ ಸ್ವಾಮೀಜಿ, ಜ್ಞಾನಯೋಗಾಶ್ರಮದ ಶ್ರೀ ಬಸವಲಿಂಗ ಮಹಾಸ್ವಾಮೀಜಿ, ಬಂಥನಾಳ ಡಾ. ವೃಷಭಲಿಂಗ ಮಹಾಶಿವಯೋಗಿಗಳು, ಮಮದಾಪುರ ಮುರುಗೇಂದ್ರ ಮಹಾಸ್ವಾಮೀಜಿ, ಹೊಳೆಬಬಲಾದಿ ಶ್ರೀ ಸಿದ್ಧರಾಮಯ್ಯ ಹೊಳಿಮಠ ಸ್ವಾಮೀಜಿ ಸೇರಿದಂತೆ ಸುಮಾರು 250 ನಾನಾ ಸ್ವಾಮೀಜಿಗಳ ಸಾನಿದ್ಯದಲ್ಲಿ ವಿವಾಹ ಆರತಕ್ಷತೆ ನಡೆಯಿತು.



ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ, ಸಚಿವ ಎಸ್. ಎಸ್. ಮಲ್ಲಿಕಾರ್ಜುನ, ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದರಾದ ರಮೇಶ ಜಿಗಜಿಣಗಿ, ಪಿ. ಸಿ. ಗದ್ದಿಗೌಡರ ವಿಜಯಪುರ ಜಿಲ್ಲೆಯ ನಾನಾ ಭಾಗಗಳಿಂದ ಮತ್ತು ನೆರೆಯ ಜಿಲ್ಲೆಗಳಿಂದ ಆಗಮಿಸಿದ್ದ ಸಹಸ್ರಾರು ಜನರು ಬಸನಗೌಡ ಮತ್ತು ಅಖಿಲಾ ದಂಪತಿಗೆ ಶುಭ ಹಾರೈಸಿದರು.

ಬೆಳಿಗ್ಗೆಯಿಂದ ಸಂಜೆಯವರೆಗೆ ಆಗಮಿಸಿದ ಒಂದು ಲಕ್ಷಕ್ಕೂ ಹೆಚ್ಚು ಜನರು ಸಚಿವ ಎಂ. ಬಿ. ಪಾಟೀಲ ಮತ್ತು ಅವರ ಪತ್ನಿ ಆಶಾ ಎಂ. ಪಾಟೀಲ ಹಾಗೂ ಅವರ ಕುಟುಂಬ ವರ್ಗದವರ ಅವರ ಪ್ರೀತಿಯ ಅಭಿಮಾನಕ್ಕೆ ಸಾಕ್ಷಿಯಾದರು.



### ವಚನ ಚಿಂತನ 245

*ನಾದ ಮುನ್ನವೊ ಬಿಂದು ಮುನ್ನವೊ?*

*ನಾದ ಮುನ್ನವೊ ಬಿಂದು ಮುನ್ನವೊ ?*
*ಕಾಯ ಮುನ್ನವೊ ಜೀವ ಮುನ್ನವೊ ?*
*ಜೀವ ಕಾಯದ ಕುಳಸ್ಥಳಂಗಳ ಬಲ್ಲವರು ನೀವು ಹೇಳಿರೆ ?*
*ಗುಹೇಶ್ವರಾ ನೀನು ಮುನ್ನವೊ ನಾನು ಮುನ್ನವೊ ?*
*ಬಲ್ಲವರು ನೀವು ಹೇಳಿರೆ ?*

*– ಅಲ್ಲಮಪ್ರಭುಗಳು*

ಈ ವಚನದಲ್ಲಿ ಅಲ್ಲಮಪ್ರಭುಗಳು ಸೃಷ್ಟಿಯ ಆರಂಭದ ಪ್ರಕ್ರಿಯೆಯಲ್ಲಿ ಯಾವ ಕಾರ್ಯ ಮೊದಲು ಜರುಗಿತು ಎಂಬ ಮೂಲ ಪ್ರಶ್ನೆಯನ್ನು ಜೀವ ಕಾಯದ ಕುಳಸ್ಥಳಂಗಳ ಬಲ್ಲವರಾದ ನೀವು ಹೇಳಿರೆ? ಎಂದು ಕೇಳಿದ್ದಾರೆ. ನಾದದಿಂದ ಬಿಂದುವೋ? ಅಥವಾ ಬಿಂದುವಿನಿಂದ ನಾದವೋ ಹೇಗೆ ಉತ್ಪತ್ತಿಯಾಯಿತು ಎಂಬುದನ್ನು ಇಂದಿಗೂ ಸಹ ವಿಜ್ಞಾನಿಗಳಿಗೆ ಬಿಡಿಸದ ಒಗಟಾಗಿದೆ. ಹಾಗೆಯೇ ಕಾಯದಿಂದ ಜೀವ ಉತ್ಪತ್ತಿಯಾಯಿತೋ ಅಥವಾ ಜೀವದಿಂದ ಕಾಯ ಮೂಡಿತೋ ಎಂಬುದರ ಬಗ್ಗೆ ಇಂದಿಗೂ ಸಹ ಸ್ಪಷ್ಟ ನಿಲುವು ಇಲ್ಲ. ಈ ಭೂಗ್ರಹದ ಮೇಲೆ ಎಂದು ಮತ್ತು ಹೇಗೆ ಜೀವಾಂಕುರವಾಯಿತೆಂಬುದಕ್ಕೆ ಉತ್ತರವಿಲ್ಲ. ಜೈವಿಕ ಅಂಶಗಳು ಭೂಮಿಗೆ ಬಾಹ್ಯಾಕಾಶದ ಅನ್ಯಗ್ರಹದಿಂದ ಧೂಮಕೇತುಗಳ ಮೂಲಕ ಬಂದವು ಎಂಬ ವಾದವು ಸಹ ಪ್ರಚಲಿತದಲ್ಲಿದೆ. ಇಂತಹ ಸೂಕ್ಷ್ಮ ವಿಚಾರಗಳನ್ನು 12ನೇ ಶತಮಾನದಲ್ಲಿ ಅಲ್ಲಮಪ್ರಭುಗಳು ಎತ್ತಿರುವುದು ನಿಜಕ್ಕೂ ಸೋಜಿಗ. ಮುಂದುವರೆದು ನಾನು ಮುನ್ನವೋ ನೀನು ಮುನ್ನವೋ ಎಂದು ಗುಹೇಶ್ವರನನ್ನು ಪ್ರಶ್ನಿಸುವುದರಲ್ಲಿ ಅರಿವಿಗೆ ಬಂದನಂತರ ದೇವರೋ ಅಥವಾ ನಮ್ಮ ಅರಿವಿಗೆ ಮೂಲಕಾರಣ ದೇವರೋ ಎಂದು ಕೇಳುವುದರೊಂದಿಗೆ ಬಲ್ಲವರೆಂದು ಹೇಳುವವರ ಬಲವಡಗಿಸಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

### ಪ್ರಗತಿ ಪರಿಶೀಲನೆ ಸಭೆಯಲ್ಲಿ ಅಧಿಕಾರಿಗಳಿಗೆ ಸಿಇಓ ರಾಹುಲ್ ಶಿಂಧೆ ಎಚ್ಚರಿಕೆ

# ಕೂಲಿಕಾರರಿಗೆ ಕೆಲಸ ನೀಡಲು ವಿಫಲರಾದಲ್ಲಿ ಕಠಿಣ ಕ್ರಮ

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲೆಯಾದ್ಯಂತ ಬರ ಪರಿಸ್ಥಿತಿ ಇರುವುದರಿಂದ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು. ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕು. ಕೆಲಸ ಬಯಸಿ ಬರುವ ಕೂಲಿಕಾರರಿಗೆ ಕೆಲಸ ನೀಡಬೇಕು. ಕೆಲಸ ನೀಡಲು ವಿಫಲರಾದಲ್ಲಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಅಧಿಕಾರಿಗಳಿಗೆ ಎಚ್ಚರಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ & ಜೈವಿಕ ತಂತ್ರಜ್ಞಾನ ಸಚಿವರಾದ ಪ್ರಿಯಾಂಕ್ ಖರ್ಗೆ ಅವರ ಸೂಚನೆ ಮೇರೆಗೆ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿಷಯಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿದ ಅವರು,

ಬರ ಪರಿಸ್ಥಿತಿ ಇರುವುದರಿಂದ ಕೂಲಿ ಬಯಸಿ ಅರ್ಜಿ ಸಲ್ಲಿಸಿದ 15 ದಿನಗಳೊಳಗಾಗಿ ಕೆಲಸ ನೀಡಬೇಕು. ಒಂದು ವೇಳೆ ಅರ್ಜಿ ಸಲ್ಲಿಸಿದ 15 ದಿನಗಳೊಳಗಾಗಿ ಕೆಲಸ ನೀಡದಿದ್ದಲ್ಲಿ ಅಂತಹ ಫಲಾನುಭವಿಗಳಿಗೆ ಕಡ್ಡಾಯವಾಗಿ ನಿರುದ್ಯೋಗ ಭತ್ಯೆ ನೀಡಲು ಕ್ರಮ ವಹಿಸುವಂತೆ ಅವರು ಸೂಚನೆ ನೀಡಿದರು.



ಸಚಿವರ ಸೂಚನೆಯಂತೆ ತಾಲೂಕು ಪಂಚಾಯತಿ ಹಂತದಲ್ಲಿ ಕಡ್ಡಾಯವಾಗಿ ನಿಗದಿಪಡಿಸಿದ ದಿನದಂದು ಸಭೆಯನ್ನು ಆಯೋಜನೆ ಮಾಡಿ, ಸಭೆಯ ನಡುವಳಿಗಳನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಬೇಕೆಂದು ಎಲ್ಲ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದರು. ಯಾವದೇ ಕಾರಣಕ್ಕೂ ಸಭೆ ರದ್ದುಗೊಳಿಸುವದನ್ನು, ಮುಂದೊಡುವದನ್ನು ಮಾಡದಂತೆ ಅವರು ಸೂಚಿಸಿದರು.

ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅನುಷ್ಟಾನ ಇಲಾಖೆಗಳು ಸಹ ನಮ್ಮ ಆರ್.ಡಿ.ಪಿ.ಆರ್ ಇಲಾಖೆಯ ಭಾಗವಾಗಿದ್ದು, ಎಲ್ಲ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಅತ್ಯಂತ ಸಮನ್ವಯತೆಯಿಂದ ಕಾರ್ಯನಿರ್ವಹಿಸುವ ಮೂಲಕ ಬರ ನಿರ್ವಹಣೆಗೆ ಸನ್ನದ್ಧರಾಗುವಂತೆ ಅವರು ತಿಳಿಸಿದರು.

ಪ್ರಗತಿ ಕುಂಠಿತ ಇರುವ ಗ್ರಾಮ ಪಂಚಾಯತಿಗಳಿಗೆ ಖುದ್ದಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರುಗಳು ಭೇಟಿ ನೀಡಿ ಗ್ರಾಮ ಪಂಚಾಯತಿ ಚುನಾಯಿತ ಸದಸ್ಯರ, ಅಧಿಕಾರಿಗಳ ಸಭೆ, ಗ್ರಾಮದಲ್ಲಿ ಸ್ವ-ಸಹಾಯ ಸಂಘದ ಸಭೆ, ಕಾಯಕ ಬಂಧುಗಳ ಸಭೆ ಆಯೋಜನೆ ಮಾಡುವ ಮೂಲಕ ಮಹಿಳೇಯರು ಹೆಚ್ಚಾಗಿ ಯೋಜನೆಯಲ್ಲಿ ಭಾಗವಹಿಸುವಂತೆ ಕ್ರಮ ಕೈಗೊಳ್ಳಬೇಕು. ನರೇಗಾ ಯೋಜನೆಯಡಿ ಎಲ್ಲ ಕೂಸಿನ ಮನೆಗಳು ಕಡ್ಡಾಯವಾಗಿ ಪ್ರಾರಂಭ ಮಾಡುವ ಮೂಲಕ ಮಹಿಳೆಯರು ಮತ್ತು ವಿಕಲಚೇತನರ ಭಾಗವಹಿಸುವಿಕೆಯನ್ನು ಹೆಚ್ಚಿಸಬೇಕು ಎಂದು ಅವರು ಸೂಚಿಸಿದರು.

ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲ ಮನೆ-ಮನೆಗೆ ಅಧಿಕಾರಿಗಳು ಭೇಟಿ ನೀಡಿ ಕರ ಪತ್ರ ಹಂಚುವದರ ಜೊತೆಗೆ ನಮೂನೆ-06ನ್ನು ಹಂಚಿಕೆ ಮಾಡಬೇಕು.. ಹಂಚಿಕೆ ಮಾಡಿದ ನಮೂನೆ-06ನ್ನು ಭರ್ತಿ ಮಾಡಿ ಕೂಲಿಕಾರರು ಗ್ರಾಮ ಪಂಚಾಯತಿಗೆ ಸಲ್ಲಿಸುವ ಮೂಲಕ ಕೆಲಸ ಪಡೆಯಬೇಕು. ಮುಖ್ಯವಾಗಿ ಪರಿಶಿಷ್ಟ ಜಾತಿ  ಪರಿಶಿಷ್ಟ ಪಂಗಡ, ಅಲ್ಪ ಸಂಖ್ಯಾತ ಸಮುದಾಯ, ಹಿಂದುಳಿದ ವರ್ಗದ ಜನರಿರುವ ಸ್ಥಳಗಳನ್ನು ಗುರಿಯಾಗಿಸಿಕೊಂಡು ಐಇಸಿ ಚಟುವಟಿಕೆಗಳನ್ನು ಆಯೋಜಿಸಿ, ಮಾಹಿತಿ ಒದಗಿಸುವಂತೆ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಜಲ ಜೀವನ್ ಮಿಷನ್ ಯೋಜನೆಯ ಕುರಿತು ಗುಣಮಟ್ಟ ಮತ್ತು ಇತರೆ ವಿಷಯಗಳ ಪ್ರಗತಿ ಪರಿಶೀಲನೆಯನ್ನು ತಾಲೂಕು ಹಂತದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಜಂಟಿಯಾಗಿ ನಡೆಸಬೇಕು. ಗ್ರಾಮ ಪಂಚಾಯತಿಯಲ್ಲಿ ತೆರಿಗೆ ವಸೂಲಾತಿಯನ್ನು ಕಡ್ಡಾಯವಾಗಿ ಪಿ.ಓ.ಎಸ್ ಮಷೀನ ಮೂಲಕ ಮಾಡಬೇಕು ಮತ್ತು ಪಿ.ಓ.ಎಸ್ ಮಷಿನ ಮೂಲಕವೇ ಸಾರ್ವಜನಿಕರಿಗೆ ರಶೀದಿ ನೀಡಬೇಕು.. ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಹಾಜರಾತಿಯನ್ನು ಕಡ್ಡಾಯವಾಗಿ ಇ-ಹಾಜರಾತಿಯಲ್ಲಿ ನಮೂದಿಸಬೇಕು. ಸಕಾಲ ಸೇರಿದಂತೆ ವಿವಿಧ ಮಾರ್ಗಗಳ ಮೂಲಕ ಸ್ವೀಕೃತ್ತವಾಗುವ ದೂರುಗಳನ್ನು ಕಾಲಮಿತಿಯೊಳಗೆ ಕಡ್ಡಾಯವಾಗಿ ಪರಿಹರಿಸಬೇಕು ಎಂದು ಅವರು ಸೂಚನೆ ನೀಡಿದರು.

ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಕುಡಿಯುವ ನೀರಿನ ಸಮಸ್ಯೆಯಾದ್ದಲ್ಲಿ ತುರ್ತಾಗಿ ಪರಿಹಾರ ಒದಗಿಸಲು ಎಲ್ಲ ಸಿದ್ಧತಾ ಕ್ರಮಗಳನ್ನು ಮುಂಚಿತವಾಗಿ ಸಿದ್ಧತೆ ಮಾಡಿಟ್ಟುಕೊಳ್ಳುವಂತೆ ಎಲ್ಲ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿಗಳಾದ ಡಾ. ವಿಜಯಕುಮಾರ ಆಜೂರ, ಮುಖ್ಯ ಲೆಕ್ಕಾಧಿಕಾರಿಗಳಾದ ರಾಮಣ್ಣ ಅಥಣಿ, ಯೋಜನಾ ನಿರ್ದೇಶಕರಾದ ಸಿ.ಬಿ.ದೇವರಮನಿ, ಅನುಷ್ಠಾನ ಇಲಾಖೆಗಳ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು, ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

### ಸ್ವೀಪ್ ಅಭಿಯಾನದ ಪೋಸ್ಟರ್ ಬಿಡುಗಡೆ:

ಇದೇ ಸಂದರ್ಭದಲ್ಲಿ ಸ್ವೀಪ್ ಅಭಿಯಾನದ ಪೋಸ್ಟರ್ ಗಳನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಅವರು ಬಿಡುಗಡೆಗೊಳಿಸಿ ಮಾತನಾಡಿದ ಅವರು, ದಿನಾಂಕ: 02 & 03 ಡಿಸೆಂಬರ್ ರಂದು ಕಡ್ಡಾಯವಾಗಿ ಎಲ್ಲ ಬೂತಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ-2024ರ ಪ್ರಯುಕ್ತ ವಿಶೇಷ ನೋಂದಣಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಅಭಿಯಾನದ ಭಾಗವಾಗಿ ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತಿ & ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತಗಟ್ಟೆಗಳಿಗೆ ಭೇಟಿ ನೀಡಿ ಅಭಿಯಾನವನ್ನು ಯಶಸ್ವಿಗೊಳಿಸಲು ಸೂಚಿಸಿದರು. ಈ ಅಭಿಯಾನದ ಕುರಿತು ಎಲ್ಲ ಗ್ರಾಮಗಳಲ್ಲಿ ಡಂಗುರ ಸಾರುವ ಮೂಲಕ ಹಾಗೂ ಸ್ವಚ್ಛ ವಾಹಿನಿಯಲ್ಲಿ ಜಿಂಗಲ್ಸ್ ಅಳವಡಿಸುವ ಮೂಲಕ ಪ್ರಚಾರ ಮಾಡಬೇಕು ಎಂದರು. ಒಟ್ಟಾರೆಯಾಗಿ ಎಲ್ಲ ಅಧಿಕಾರಿಗಳು ಅತೀ ಉತ್ಸಾಹದಿಂದ ಭಾಗವಹಿಸಿ ಅಭಿಯಾನವನ್ನು ಯಶಸ್ವಿಗೊಳಿಸಬೇಕು ಎಂದರು.

# ಬೌದ್ಧಿಕ ಮಟ್ಟ ಬೆಳವಣಿಗೆಗೆ ಪ್ರತಿಭಾ ಕಾರಂಜಿ ಕಲೋತ್ಸವ ಸಹಕಾರಿ

ಉದಯರಶ್ಮಿ ನ್ಯೂಸ್




ಬಸವನಬಾಗೇವಾಡಿ: ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯನ್ನು ಅನಾವರಣ ಗೊಳಿಸಲು ಶಿಕ್ಷಕರು, ಪಾಲಕರು ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡುವಂತಾಗಬೇಕೆಂದು ಸಹಕಾರ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ ಹೇಳಿದರು.

ಪಟ್ಟಣದ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಹೆಣ್ಣುಮಕ್ಕಲ ಮಾದರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಜಿಲ್ಲಾ ಪಂಚಾಯತ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕ್ಷೇತ್ರಶಿಕ್ಷಣಾಧಿಕಾರಿಗಳ ಹಾಗೂ ಕ್ಷೇತ್ರಸಮನ್ವಯಾಧಿಕಾರಿಗಳ ಕಾರ್ಯಾಲಯದ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಪ್ರತಿಭಾ ಕಾರಂಜಿ ಕಲೋತ್ಸವದಂತಹ ಕಾರ್ಯಕ್ರಮಗಳು ಬೌದ್ಧಿಕ ಮಟ್ಟ ಬೆಳವಣಿಗೆಗೆ ತುಂಬಾ ಸಹಕಾರಿಯಾಗುತ್ತದೆ. ನಿರ್ಣಾಯಕರು ತಮ್ಮ ನಿರ್ಣಯವನ್ನು ಪಾರದರ್ಶಕವಾಗಿ ನೀಡುವ ಮೂಲಕ ಸೂಕ್ತ ಪ್ರತಿಭೆಯನ್ನು ಮುಂದಿನ ಹಂತಕ್ಕೆ ಕಳುಹಿಸಿದರೆ ತಾಲೂಕಿಗೆ ಕೀರ್ತಿ ಬರುತ್ತದೆ. ತಾಲೂಕಿನ ಪ್ರಿಯಾ ಲಮಾಣಿ ಅವಳು ಇನ್‌ಸ್ಪೈಯರ್ ಅವಾರ್ಡ್‌ನಲ್ಲಿ ರಾಷ್ಟ್ರ ಮಟ್ಟದಲ್ಲಿ ಆಯ್ಕೆಯಾಗಿ ಅಂತಾರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿರುವದು ಪ್ರತಿಭಾವಂತ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ, ಪ್ರೋತ್ಸಾಹ ನೀಡಿದರೆ ಇಂತಹ ಸಾಧನೆ ಮಾಡುತ್ತಾರೆ ಎಂಬುವದಕ್ಕಿ ನಿದರ್ಶನವಾಗಿದೆ ಎಂದರು.

ನ್ಯಾಯವಾದಿ ಬಿ.ಕೆ. ಕಲ್ಲೂರ ಮಾತನಾಡಿ, ಎಲ್ಲ ಮಕ್ಕಳಲ್ಲಿ ಒಂದಿಲ್ಲೊಂದು ಪ್ರತಿಭೆ ಅಡಕವಾಗಿರುತ್ತದೆ. ಅವರಲ್ಲಿರುವ ಪ್ರತಿಭೆಗೆ ಇಂತಹ ವೇದಿಕೆಗಳು ಅವಕಾಶ ನೀಡುತ್ತವೆ. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ಜೊತೆಗೆ ಅವರಲ್ಲಿ ಪರಿವರ್ತನೆ ಮಾಡುವ ಶಕ್ತಿ ಪಾಲಕರಿಗೆ, ಶಿಕ್ಷಕರಿಗೆ ಇದೆ.ಮಕ್ಕಳು ಇಂತಹ ವೇದಿಕೆಯನ್ನು ಸದುಪಯೋಗ ಪಡೆದುಕೊಳ್ಳಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಬಿಇಓ ವಸಂತ ರಾಠೋಡ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಓದಿನ ಜೊತೆಗೆ ಕ್ರೀಡೆ, ಕಲೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಉತ್ತಮ ಪ್ರತಿಭಾವಂತರಾಗಲು ಸಾಧ್ಯ. ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರತೆಗೆಯುವ ನಿಟ್ಟಿನಲ್ಲಿ ಸರ್ಕಾರ ಪ್ರತಿಭಾ ಕಾರಂಜಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಶಿಕ್ಷಕರು ಮಕ್ಕಳಿಗೆ ಪ್ರೋತ್ಸಾಹ ನೀಡುವ ಮೂಲಕ ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡಬೇಕು. ತೀರ್ಪುಗಾರರು ಉತ್ತಮ ರೀತಿಯಲ್ಲಿ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಕ್ರಮಬದ್ಧ ತೀರ್ಪು ನೀಡುವ ಮೂಲಕ ತಾಲೂಕಿನ ಪ್ರತಿಭಾವಂತ ಮಕ್ಕಳು ರಾಜ್ಯಮಟ್ಟದವರೆಗೂ ಹೋಗುವಂತೆ ಮಾಡಬೇಕೆಂದರು.

ವೇದಿಕೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ,ಜೆಡಿಎಸ್ ಧುರೀಣ ಶಿವನಗೌಡ ಬಿರಾದಾರ, ವಿವಿಧ ಶಿಕ್ಷಕರ ಸಂಘಟನೆಯ ಅಧ್ಯಕ್ಷರಾದ ಎಸ್.ಎಚ್.ಉಕ್ಕಲಿ, ಎಸ್.ಎಸ್.ಅವಜಿ, ಬಸವರಾಜ ಪೂಜಾರಿ, ಶಿವಾನಂದ ಮಂಗಾನವರ, ಎಂ.ಬಿ.ತೋಟದ, ಆರ್.ಎ.ನದಾಫ್, ಬಿ.ಎನ್.ನಾಯಕರ, ಎಸ್.ಎಂ.ದಳವಾಯಿ,ಎಂ.ಎಚ್.ಜಮುನಾ, ಸಿ.ಟಿ.ಮಾದರ, ಆರ್.ಬಿ.ಗೌಡರ, ವೈ.ಎನ್.ಬೇವೂರ, ಎಸ್.ಬಿ.ಒನರೊಟ್ಟಿ, ಎಂ.ಎನ್.ಯಾಳವಾರ, ಎಂ.ಎಸ್.ಮುರಾಳ, ಪಿ.ವೈ.ರತ್ನಾಕರ ಇತರರು ಇದ್ದರು. ಪ್ರಾಸ್ತವಿಕವಾಗಿ ಬಿಆರ್‌ಪಿ ಬಿ.ಎಸ್.ಅವಟಿ ಮಾತನಾಡಿದರು. ಕ್ಷೇತ್ರಸಮನ್ವಯಾಧಿಕಾರಿ ಪಿ.ಯು. ರಾಠೋಡ ಸ್ವಾಗತಿಸಿದರು. ಪಿ.ಆರ್.ಮೆಂಚ, ಭಾರತಿ ಪಾಟೀಲ ನಿರೂಪಿಸಿದರು. ಬಿಆರ್‌ಪಿ ಎಂ.ವ್ಹಿ. ಗಬ್ಬೂರ ವಂದಿಸಿದರು.

ಅಖಂಡ ಬಸವನಬಾಗೇವಾಡಿ ತಾಲೂಕಿನ ಪ್ರಾಥಮಿಕ, ಪ್ರೌಢಶಾಲೆ ವಿದ್ಯಾರ್ಥಿಗಳು ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಒಂದರಿಂದ ನಾಲ್ಕನೇ ತರಗತಿ ಮಕ್ಕಳಿಗೆ 14 ಸ್ಪರ್ಧೆಗಳು, ಐದರಿಂದ ಏಳನೇ ತರಗತಿ ಮಕ್ಕಳಿಗೆ 16 ಸ್ಪರ್ಧೆಗಳು, ಎಂಟರಿಂದ 10 ನೇ ತರಗತಿ ಮಕ್ಕಳಿಗೆ 16 ಸ್ಪರ್ಧೆಗಳು ಹಮ್ಮಿಕೊಳ್ಳಲಾಗಿತ್ತು. ಎಲ್ಲ ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಮಕ್ಕಳು ಭಾಗವಹಿಸಿದರು.

# ಶರಣ ಸಾಹಿತ್ಯ ಪರಿಷತ್ತಿನಿಂದ ಬೆಳಕು ಚೆಲ್ಲುವ ಕಾರ್ಯ

ಉದಯರಶ್ಮಿ ನ್ಯೂಸ್




ಸಿಂದಗಿ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು 1986ರಲ್ಲಿ ಸ್ಥಾಪನೆಗೊಂಡು, ಶರಣರ ವೈಚಾರಿಕತೆ, ಸಮಸಮಾಜಗಳ ನಿರ್ಮಾಣಕ್ಕಾಗಿ ನಡೆಸಿದ ಹೋರಾಟ ಮತ್ತು ಅವರ ವಚನಗಳಲ್ಲಿನ ಚಿಂತನೆಗಳಿಗೆ ಬೆಳಕು ಚೆಲ್ಲುವ ಮಹತ್ತರ ಕಾರ್ಯವನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮಾಡುತ್ತಿದೆ ಎಂದು ಆರ್.ಡಿ.ಪಾಟೀಲ ಪದವಿಪೂರ್ವ ಮಹಾವಿದ್ಯಾಲಯದ ಉಪನ್ಯಾಸಕ ಪಿ.ವ್ಹಿ.ಮಹಲಿನಮಠ ಹೇಳಿದರು.

ಪಟ್ಟಣದ ಶ್ರೀ ಪದ್ಮರಾಜ ಮಹಿಳಾ ಪದವಿ ಮಹಾವಿದ್ಯಾಲಯದಲ್ಲಿ ಇಂದು ಲಿಂ.ಚೆನ್ನಮ್ಮ ಚನ್ನಪ್ಪ ವಮ್ಮಾ ಇವರ ಸ್ಮರಣಾರ್ಥ ಡಾ.ಅಮಿತ್ ಆರ್.ವಾರದ ಹಾಗೂ ಲಿಂ.ಲಕ್ಕಮ್ಮ ಚಂದ್ರಾಮಪ್ಪ ಸಿಂದಗಿ ಅವರ ಸ್ಮರಣಾರ್ಥ ಗುತ್ತಿಗೆದಾರ ಮಹಾದೇವಪ್ಪ ಚಂದ್ರಾಮಪ್ಪ ಸಿಂದಗಿ ಅವರು ನೀಡಿದ ದತ್ತಿ ದಾನದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಿಳೆ, ಮಕ್ಕಳು, ಯುವಕರಲ್ಲಿ ಶರಣ ಸಾಹಿತ್ಯದ ಜ್ಞಾನವನ್ನು ಮನೆಯಲ್ಲಿ ಮಹಾಮನೆ ಎಂಬ ವಚನ ದೀವಿಗೆಯನ್ನು ಮನೆ–ಮನೆ ಜಗುಲಿಗೆ ಕೊಂಡೊಯ್ದು ಶರಣರ ಸಂದೇಶಗಳನ್ನು ಬಿತ್ತರಿಸುತ್ತಿದೆ. ಇದರ ವ್ಯಾಪ್ತಿ ಅನ್ಯ ರಾಜ್ಯಗಳು ಸೇರಿದಂತೆ ವಿಶ್ವದೆಲ್ಲೆಡೆ ಪ್ರಚಲಿತದಲ್ಲಿರುವುದು ದೇಶವೇ ಹೆಮ್ಮೆ ಪಡುವ ಸಂಗತಿಯಾಗಿದ್ದು, ಶರಣರ ಜೀವನ ಮತ್ತು ಅವರು ನೀಡಿರುವ ವಚನಗಳು ಇಂದು ಡಿಜಿಟಲೀಕರಣಗೊಂಡಿದ್ದು, ಅವುಗಳನ್ನು ಕೇಳಿ, ತಿಳಿದು ಯುವಕರು ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ದಾನಯ್ಯ ಮಠಪತಿ ಅವರು ಶರಣೆ ಶ್ರೀ ಗುಡ್ಡಾಪುರ ದಾನಮ್ಮದೇವಿ ಕುರಿತು ಉಪನ್ಯಾಸ ನೀಡಿ, ಲಿಂಗಮ್ಮಳು ಬಾಲ್ಯದಲ್ಲಿಯೇ ದೈವಿ ಸ್ವರೂಪಿಯಾಗಿ, ತನ್ನ ಗುರುಗಳಿಂದ ಪಡೆದ ದೇವ ಸಂಸ್ಕಾರದಿಂದ ಅಸಮಾನ್ಯ ಸಾಮರ್ಥ್ಯವನ್ನು ಹೊಂದಿ, ಧ್ಯಾನ, ಪೂಜೆಗಳಲ್ಲಿ ತಲ್ಲೀನಳಾಗಿ, ಅನೇಕ ಪವಾಡಗಳನ್ನು ಮಾಡಿ ಹೋರಾಟ ನಡೆಸಿ, ತನ್ನ ಜೋಳಿಗೆಯಲ್ಲಿದ್ದ ಎಲ್ಲವನ್ನೂ ಪರರ ಸುಖಕ್ಕಾಗಿ ದಾನವಾಗಿ ನೀಡುತ್ತ, ಜನನದ ಮೂಲ ಒಂದೇ ಆದರು ಜೀವ ಭಿನ್ನ ಭಾವದ ಕುರಿತು ಉತ್ತರ ಹುಡುಕುತ್ತ ಕಲ್ಯಾಣಕ್ಕೆ ಹೋಗಿ, ಶರಣರೊಡಗೂಡಿ ಶರಣೆ ದಾನಮ್ಮ ಎಂಬ ಪ್ರಶಂಸೆಯೊಂದಿಗೆ ಮರಳಿ ನಾಡಿನ ಶರಣರ ವಚನಗಳನ್ನು ಪಸರಿಸುತ್ತ ಇಂದಿಗೂ ಜೀವಂತ ದೇವರಾಗಿ, ಅನ್ನದಾನದ ಶ್ರೇಷ್ಠತೆಯನ್ನು ಸಮಾಜಕ್ಕೆ ಅರುಹಿದ್ದಾಳೆ ಎಂದರು.

ಈ ವೇಳೆ ನಿಕಟಪೂರ್ವ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚನ್ನಪ್ಪ ಕತ್ತಿ ಅವರು ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಶಸಾಪ ತಾಲೂಕು ಘಟಕದ ಅಧ್ಯಕ್ಷ ಡಾ.ಶರಣಬಸವ ಜೋಗೂರ, ಮಹಿಳಾ ಕಾಲೇಜಿನ ಪ್ರಾಚಾರ್ಯ ಎಸ್.ಎಂ.ಪೂಜಾರಿ ಮಾತನಾಡಿದರು.

ವಿದ್ಯಾರ್ಥಿನಿ ಬೌರಮ್ಮ ಸಾರಂಗಮಠ ನಿರೂಪಿಸಿದರು. ಯುವ ಘಟಕ ಅಧ್ಯಕ್ಷ ಪ್ರಸನ್ನ ಜೋಗೂರ ಸ್ವಾಗತಿಸಿದರು. ಕದಳಿ ವೇದಿಕೆ ಉಪಾಧ್ಯಕ್ಷೆ ಡಾ.ಸೀಮಾ ವಾರದ ವಂದಿಸಿದರು. ಸಾಹಿತಿ ಶಿವಕುಮಾರ ಶಿವಶಿಂಪಿಗೇರ, ಸಿದ್ದಲಿಂಗ ಕಿಣಗಿ, ಯು.ಸಿ.ಪೂಜಾರಿ, ಶಕುಂತಲಾ ಹಿರೇಮಠ, ಪ್ರಾಚಾರ್ಯೆ ಜಗದೇವಿ ನಂದಿಕೋಲ, ಜಗದೇವಿ ಅಂಬಲಗಿ, ಗಿರೀಶ ಕುಲಕರ್ಣಿ, ಸಾಹೇಬಗೌಡ ದುದ್ದಗಿ, ಪಿ.ಎಂ.ಮಾಲಿಪಾಟೀಲ, ಎಸ್.ಎಮ್.ಹೂಗಾರ, ಎಂ. ಕೆ ಬಿರಾದಾರ, ಮಂಗಳಾ ಈಳಗೇರ, ಡಿ.ಎಂ. ಪಾಟೀಲ ಸೇರಿದಂತೆ ವಿದ್ಯಾರ್ಥಿನಿಯರಿದ್ದರು.

# ಡಿ.9ರಂದು ರಾಷ್ಟ್ರೀಯ ಲೋಕ್ ಅದಾಲತ್

ಉದಯರಶ್ಮಿ ನ್ಯೂಸ್

ವಿಜಯಪುರ: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ವಿಜಯಪುರ ಜಿಲ್ಲೆಯ ಜಿಲ್ಲಾ ಕೇಂದ್ರ ಹಾಗೂ ತಾಲೂಕಾ ಕೇಂದ್ರಗಳ ಎಲ್ಲ ನ್ಯಾಯಾಲಯಗಳಲ್ಲಿ ಡಿಸೆಂಬರ್ 9ರಂದು ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದೆ.

ಲೋಕ್ ಅದಾಲತ್‌ನಲ್ಲಿ ರಾಜಿಯಾಗಬಹುದಾದ ಎಲ್ಲ ಕ್ರಿಮಿನಲ್ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ಕೋರಿ ಸಲ್ಲಿಸಿರುವ ಪ್ರಕರಣಗಳು,ಕೌಟುಂಬಿಕ ವ್ಯಾಜ್ಯಗಳು, ಆಸ್ತಿಯಲ್ಲಿ ಪಾಲು ಕೋರಿ ಸಲ್ಲಿಸಿರುವ ದಾವೆಗಳು, ದೂರವಾಣಿ, ನೀರಿನ ಬಿಲ್ಲು ಬಾಕಿ ಪಾವತಿ ಪ್ರಕರಣಗಳು, ಜೀವನಾಂಶ ಕೋರಿ ಸಲ್ಲಿಸಿರುವ ಪ್ರಕರಣಗಳು, ಕಾರ್ಮಿಕ ವ್ಯಾಜ್ಯಗಳು, ಭೂಸ್ವಾಧೀನ ಪ್ರಕರಣಗಳು, ಕಂದಾಯ ಪ್ರಕರಣಗಳು, ಸಾಲ ವಸೂಲಾತಿ, ಬ್ಯಾಂಕ್ ವ್ಯಾಜ್ಯಗಳು ಹಾಗೂ ಇತರೆ ಸಿವ್ಹಿಲ್ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುವುದು.

ಸಾರ್ವಜನಿಕರು ರಾಷ್ಟ್ರೀಯ ಲೋಕ್ ಅದಾಲತ್ ಕಾರ್ಯಕ್ರಮದಲ್ಲಿ ಭಾಗವಹಿಸಿ, ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವ ಮೂಲಕ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹಿರಿಯ ಸಿವ್ಹಿಲ್ ನ್ಯಾಯಾಧೀಶ ಸಂತೋಷ ಎಸ್.ಕುಂದರ್ ಅವರು ಕೋರಿದ್ದಾರೆ.

# ಪೌರಾಣಿಕ ನಾಟಕಗಳು ಸಂಸ್ಕಾರ ನೀಡುವ ತಾಣಗಳು :ಬಿ.ಡಿ.ಪಾಟೀಲ

ಉದಯರಶ್ಮಿ ನ್ಯೂಸ್



ಇಂಡಿ: ಪೌರಾಣಿಕ ನಾಟಕಗಳು ಮನುಷ್ಯನಿಗೆ ಸಂಸ್ಕಾರ ನೀಡುವ, ಸಮಾಜದ ಓರೆ ಕೊರೆ ತಿದ್ದುವ ಪ್ರಮುಖ ಮಾಧ್ಯಮ ವಾಗಿದೆ ಎಂದು ಜೆಡಿಎಸ್ ಮುಖಂಡ ಬಿ.ಡಿ ಪಾಟೀಲ್ ಹೇಳಿದರು.

ತಾಲೂಕಿನ ನಿಂಬಾಳ ಬಿ ಕೆ ಗ್ರಾಮದಲ್ಲಿ ದಾಸ ಶ್ರೇಷ್ಠ ಭಕ್ತ ಕನಕದಾಸರ 536ನೆಯ ಜಯಂತಿಯ ಅಂಗವಾಗಿ ಶ್ರೀ ಬೀರಲಿಂಗೇಶ್ವರ ಮಹಾತ್ಮೆ ಯಂಬ ಸುಂದರ ಪೌರಾಣಿಕ ನಾಟಕವನ್ನು ಉದ್ಘಾಟಿಸಿ ಮಾತಾನಾಡಿದರು.

ಇಂದಿನ ಆದುನಿಕ ಯುಗದಲ್ಲಿ ಜಾನಪದ, ಹಾಗೂ ಪೌರಾಣಿಕ ನಾಟಕಗಳು ನಶಿಸುತ್ತಿರುವ ಸಂದರ್ಭದಲ್ಲಿ, ನಿಂಬಾಳ ಗ್ರಾಮದಲ್ಲಿ ಶ್ರೀ ಬೀರಲಿಂಗೇಶ್ವರ ಮಹಾತ್ಮೆ ಯಂಬ ಪೌರಾಣಿಕ ನಾಟಕದ ಪ್ರದರ್ಶನ ನಡೆಯುತ್ತಿದ್ದು, ಸಂತಸದ ಮತ್ತು ಹೆಮ್ಮೆಯ ಪಡುವ ವಿಚಾರ. ನಾಟಕಗಳು ಪ್ರತಿಯೊಬ್ಬರಿಗೂ ಉತ್ತಮ ಸಂಸ್ಕಾರವನ್ನು ಕಲಿಸುವ ಮಾಧ್ಯಮವಾಗಿ ಸಮಾಜದಲ್ಲಿ ಸದ್ದು ಗದ್ದಲು ವಿಲ್ಲದೆ ಕಾರ್ಯಮಾಡುತ್ತಿರುವುದು ಶ್ಲಾಘನೀಯ. ಶಿಷ್ಯ ಮಹಿಮಾಂತಕ ಶ್ರೀ ಮಾಳಿಂಗರಾಯ ಹಾಗೂ ಗುರು ಶ್ರೀ ಬೀರಲಿಂಗೇಶ್ವರ ನಡುವೆ ನಡೆಯುವ ಸಂಭಾಷಣೆ ಒಬ್ಬ ಆದರ್ಶ ಗುರು ಶಿಷ್ಯರ ಸಂಬಂಧಗಳ ಬಗ್ಗೆ ಪ್ರತಿಯೊಬ್ಬರು ಅಳವಡಿಸಿಕೊಳ್ಳುವ ಮೂಲಕ, ಇಂತಹ ಭಕ್ತಿ ಪ್ರಧಾನ ನಾಟಕಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮಾತನಾಡಿದರು. ಸಾನಿಧ್ಯವನ್ನು ಗದ್ದುಗೆ ಪೂಜಾರಿ ಮಲಕಪ್ಪ ಬಿರಾದಾರ, ಮುಖ್ಯ ಅತಿಥಿಯಾಗಿ ಗ್ರಾಂ.ಪಂ ಅಧ್ಯಕ್ಷ ಲಕ್ಷ್ಮಿಬಾಯಿ ನಾಯಕ್ಕೋಡಿ, ಉಪಾಧ್ಯಕ್ಷ ಶಿವಾ ಟೆಂಗಳೆ, ಮುಖಂಡ ಸಿದ್ದಣಗೌಡ ಪಾಟೀಲ, ಸೂರ್ಯಕಾಂತ ಹಿರೇಕುರಬರ, ಶ್ರೀಮಂತ ಹಿರೇಕುರಬರ, ಶಿವಾನಂದ ಬಿರಾದಾರ, ಅರವಿಂದ್ ಗಿಡಗಂಟಿ, ಅಶೋಕ ಮರಡಿ, ಗಜಾನನ ಪುಟಾಣಿ, ಬಾಬು ಘಾಟಗೆ, ಮುರಳಿ ಘಾಟಗೆ, ಶಿವಪ್ಪ ಮೆಂಬರ್, ವ್ಹಿ ಜಿ ಬಿರಾದಾರ, ನಾನಾ ಗಿಡಗಂಟಿ, ಬಸು ವಡ್ಡರ್, ಶಿವಪ್ಪ ವಂದಾಲ, ಶರಣಪ್ಪ ವಡ್ಡರ, ಬಸಲಿಂಗಪ್ಪ ಉಪಾಸೆ ಹಾಗೂ ಮುಂತಾದವರು ಉಪಸ್ಥಿತರಿದ್ದರು ಗೌಡಪ್ಪ ಬಿರಾದಾರ ನಿರೂಪಿಸಿದರು, ಮಹಿಬೂಬ ಗಿರಗಾಂವ ವಂದಿಸಿದರು.

# ಅನೀಮಿಯಾ ಮುಕ್ತ ಪೌಷ್ಠಿಕ ಕರ್ನಾಟಕ ಕಾರ್ಯಕ್ಕೆ ಕೈಜೋಡಿಸಿ :ಡಾ.ಶ್ವೇತಾ

ಉದಯರಶ್ಮಿ ನ್ಯೂಸ್



ಕಲಕೇರಿ: ನವಜಾತ ಶಿಶುಗಳು,ಮಕ್ಕಳು ಹದಿಹರೆಯದವರು,ಗರ್ಭಿಣಿಯರು,ತಾಯಂದಿರಲ್ಲಿ ರಕ್ತಹೀನತೆ ಮತ್ತು ಅಪೌಷ್ಠಿಕತೆ ನಿವಾರಿಸಲು 'ಅನೀಮಿಯಾ ಮುಕ್ತ ಪೌಷ್ಠಿಕ ಕರ್ನಾಟಕ' ಯೋಜನೆಗೆ ಸರ್ಕಾರ ಮತ್ತು ಆರೋಗ್ಯ ಇಲಾಕೆ ಮುಂದಾಗಿದ್ದು ಇದಕ್ಕೆ ಇದರ ಯಶಸ್ಸಿಗೆ ಪ್ರತಿಯೋಬ್ಬರು ಮುಂದಾಗಬೇಕು. ಅನೀಮಿಯಾ ಮುಕ್ತ ಕರ್ನಾಟಕ ಮಾಡಲು ಸಂಕಲ್ಪಮಾಡಬೇಕಿದೆ ಎಂದು ಸಿಂದಗಿಯ ಡಾ.ಶ್ವೇತಾ ಸ್ಥಾವರಮಠ ಹೇಳಿದರು.

ಶುಕ್ರವಾರ ಕಲಕೇರಿ ಗ್ರಾಮದ ಮಲ್ಲಿಕಾರ್ಜುನ ವಿಧ್ಯಾವರ್ಧಕ ಸಂಘದ ಬಸವೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿಧ್ಯಾರ್ಥಿಗಳಿಗೆ ಹಮ್ಮಿಕೊಂಡ ತಪಾಸಣೆ ಶಿಬಿರದಲ್ಲಿ ಅವರು ಮಾತನಾಡಿದರು.

ಮಕ್ಕಳು,ವಿಧ್ಯಾರ್ಥಿ,ವಿಧ್ಯಾರ್ಥಿನಿಯರು,ಗರ್ಭಿಣಿಯರು,ಬಾಣಂತಿಯರು ಸಮಾಜದಲ್ಲಿ ಉತ್ತಮ ಆರೋಗ್ಯವಂತಯರಾಗಿ ಬದುಕಬೇಕು ಎನ್ನುವ ಸದುದ್ದೇಶದಿಂದ ಸರ್ಕಾರ ಮತ್ತು ಆರೋಗ್ಯ ಇಲಾಖೆ ನುರಿತ ವೈದ್ಯರಿಂದ ತಪಾಸಣೆ ನಡೆಸಿ ಅನೀಮಿಯಾದಿಂದ ಬಳಲುತ್ತಿರುವವರಿಗೆ ಸೂಕ್ತ ಚಿಕಿತ್ಸೆ ನಿಡಿ ಅವರಿಗೆ ಔಷದಿ ಮತ್ತು ಮಾತ್ರೆಗಳನ್ನು ನಿಡಲಾಗುತ್ತದೆ ಎಲ್ಲರೂ ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಸಲಹೆ ಮಾಡಿದರು, ಈ ಸಂದರ್ಭದಲ್ಲಿ ಸುಮಾರು 200 ಕ್ಕೂ ಹೆಚ್ಚು ಮಕ್ಕಳಿಗೆ ಹೆಮೋಗ್ಲೊಬಿನ್ ತಪಾಸಣೆ ಮಾಡಿ ರಕ್ತ ಹೀನತೆಯಿಂದ ಬಳಲುತ್ತಿರುವ ಮಕ್ಕಳಿಗೆ ಮಾತ್ರೆಗಳನ್ನು ವಿತರಿಸಲಾಯಿತು,

ಪ್ರಭಾರಿ ಪ್ರಾಚಾರ್ಯರಾದ ಬಿ ಜಿ ಚನಗೊಂಡ ಮಾತನಾಡಿ ವಿಧ್ಯಾರ್ಥಿಗಳು ಆರೋಗ್ಯ ಇಲಾಖೆ ಕೈಗೊಂಡಿರುವ ಈ ಕಾರ್ಯಕ್ರಮಕ್ಕೆ ಸ್ವಯಂ ಪ್ರೇರಿತರಾಗಿ ಬಂದು ತಪಾಸಣೆ ಮಾಡಿಕೊಳ್ಳಬೇಕು, ಜೊತೆಗೆ ಅನೀಮಿಯಾ ಮುಕ್ತ ಕರ್ನಾಟಕ ಮಾಡಲು ಪ್ರತಿಯೊಬ್ಬರು ಕಾರ್ಯಕ್ರಮದ ಯಶಸ್ಸಿಗೆ ಕೈಜೋಡಿಸಬೇಕಿದೆ ಎಂದು ಹೆಳಿದರು.

ಡಾ.ಪ್ರೀಯಾಂಕಾ ಕುಂಬಾರ, ಆಪ್ತ ಸಮಾಲೋಚಕ ಅಪ್ಪಾಸಾಬ ಮಾಂಗ ಮಾತನಾಡಿದರು.

ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಅನಿತಾ ದೊಡ್ಡಮನಿ, ಸುಶ್ಮೀತಾ ಮುಳ್ಳಾಮಠ, ಆರತಿ ಮಲ್ಯಾಳ, ರುಪಾ ಕುಂಬಾರ, ಎಸ್ ಎಸ್ ಲಮಾಣಿ, ಚಂದ್ರು ಕಾಳೆ, ಎಸ್ ಎಸ್ ಕಲಶೇಟ್ಟಿ, ಶಾಂತು ಧುರ್ಗಿ, ರವಿಕುಮಾರ ಗುಮಶೇಟ್ಟಿ, ಬಸು ಕುಂಬಾರ, ವಿರೇಶ ಝಳಕಿ ಸೇರಿದಂತೆ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಇದ್ದರು.

# ವಿದ್ಯಾರ್ಥಿವೇತನ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಉದಯರಶ್ಮಿ ನ್ಯೂಸ್

ವಿಜಯಪುರ: ಪ್ರಸಕ್ತ ಸಾಲಿನಲ್ಲಿ 1 ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಅವಧಿಯನ್ನು ದಿನಾಂಕ : 08–12–2023ರವರೆಗೆ ವಿಸ್ತರಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿಗಳು ತಿಳಿಸಿದ್ದಾರೆ.

ಅರ್ಹ ಅಭ್ಯರ್ಥಿಗಳು ಮೆಟ್ರಿಕ್ ಪೂರ್ವ ಆನ್‌ಲೈನ್ ವೆಬ್‌ಸೈಟ್ https://ssp.karnataka.gov.in ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ಹಾಗೂ ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ https://dom.karnataka.gov.in ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸುವಂತೆ ಅವರು ತಿಳಿಸಿದ್ದಾರೆ.

## ಮೋರಟಗಿ ರೇವಣಸಿದ್ಧೇಶ್ವರ ಸಿದ್ಧರಾಮೇಶ್ವರ ಜಾತ್ರಾ ಮಹೋತ್ಸವ ಉದ್ಘಾಟನೆ

# ಅಕ್ಷರ ಜ್ಞಾನದ ಜೊತೆ ಸಂಸ್ಕಾರ ಮುಖ್ಯ :ಶಾಸಕ ಮನಗೂಳಿ

ಉದಯರಶ್ಮಿ ನ್ಯೂಸ್



ಮೋರಟಗಿ: ಅಕ್ಷರ ಜ್ಞಾನದ ಜೊತೆಯಲ್ಲಿ ಭಾರತೀಯ ಸಂಸ್ಕೃತಿ ಸಂಸ್ಕಾರ ಮುಖ್ಯ ಎಂದು ಹೇಳಿದರು.

ಸ್ಥಳೀಯ ರೇವಣಸಿದ್ಧೇಶ್ವರ ಸಿದ್ಧರಾಮೇಶ್ವರ ಜಾತ್ರಾ ಮಹೋತ್ಸವದ ಕಾರ್ಯಕ್ರಮದಲ್ಲಿ ಸಸಿಗೆ ನೀರು ಎರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬೆಳೆಯುವ ಮಕ್ಕಳ ಭವಿಷ್ಯ ಬರೆಯುವುದು ಪಾಲಕರ ಕರ್ತವ್ಯ. ಎಂಎ[illegible], ಎಂಪಿ, ಡಿಸಿ, ಡಾಕ್ಟರ, ಇಂಜನೀಯರ ಹೀಗೆ ಹಲವು ಕನಸುಗಳನ್ನು ಮಕ್ಕಳ ಮೂಲಕ ಬೆಳಸುವುದು ತಪ್ಪಲ್ಲ. ಜೊತೆಯಲ್ಲಿ ಸಂಸ್ಕಾರ ಕಲಿಸುವುದು ಅಷ್ಟೆ ಮುಖ್ಯ. ತಂದೆ ತಾಯಿ ಅಕ್ಕ ತಂಗಿ ಅಣ್ಣ ತಮ್ಮ ಬಂಧು ಬಳಗ ಗಂಡ ಹೆಂಡತಿ ಎಂಬ ಅನ್ಯೋನ್ಯತೆಯ ಮಹತ್ವ, ದೇವಸ್ಥಾನ, ಭಕ್ತಿ, ಸಂಪ್ರದಾಯ, ಆಚಾರ, ಪದ್ಧತಿ ಮುಂದುವರೆಸುವ ಜ್ಞಾನ ತುಂಬುವ ಕರ್ತವ್ಯ ಹಿರಿಯರದ್ದು ಎಂದ ಅವರು ನಾನು ಶಾಸಕನಾಗಲು ತಾವುಗಳು ಕಾರಣ. ನಿಮ್ಮಿಂದ ನಾನು. ನನ್ನಿಂದ ಮುಂಬರುವ ದಿನ ಮಾನಗಳಲ್ಲಿ ಗ್ರಾಮದ ಅಭಿವೃದ್ದಿಯ ಕೆಲಸಗಳನ್ನು ಪ್ರಾಮಾಣಿಕವಾಗಿ ಮಾಡುವೆ ಎಂದು ಹೇಳಿದರು.

ಮೋರಟಗಿ ಗ್ರಾಮದ ಬಹುದಿನಗಳ ಕನಸು ಶ್ರೀ ಸಿದ್ಧರಾಮೇಶ್ವರ ಕಲ್ಯಾಣ ಮಂಟಪದ ಅಡಿಗಲ್ಲು ಸಮಾರಂಭ ಅತಿ ಶೀಘ್ರದಲ್ಲಿ ನೆರವೇರಿಸಿ, ಸರಕಾರದ ಅನುದಾನ ಕಲ್ಪಿಸುವ ದಿಶೆಯಲ್ಲಿ ಹೆಜ್ಜೆ ಇಟ್ಟಿರುವೆ. ಆದಷ್ಟು ಬೇಗ ಕಲ್ಯಾಣ ಮಂಟಪದ ಕೆಲಸ ಪ್ರಾರಂಭಕ್ಕೆ ಚಾಲನೆ ನೀಡುವೆ ಎಂದರು.

ಕಡಕೋಳದ ರುದ್ರಮುನಿ ಶಿವಾಚಾರ್ಯರು, ಹೂವಿನಳ್ಳಿಯ ಗುರುಲಿಂಗಯ್ಯ ಸ್ವಾಮಿ, ಹಿರಿಯರಾದ ನಿಂಗನಗೌಡ ಪಾಟೀಲ, ಎನ್.ಆರ್. ತಿವಾರಿ, ಅರವಿಂದ ಹಂಗರಗಿ, ರವಿಕಾಂತ ನಡುವಿನಕೆರಿ, ಇಸೂಫ್ ಮುಲ್ಲಾ, ಚನ್ನಬಸು ದುದ್ದಗಿ, ಭೂತಾಳಿ ವಸ್ತಾರಿ, ಬಂದೇನವಾಜ ಕಣ್ಣಿ, ಈರಣ್ಣ ವಿಶ್ವಕರ್ಮ, ಅನೀಲಗೌಡ ಪಾಟೀಲ, ಶ್ರೀಶೈಲ ಮಂದೇವಾಲಿ, ಹರೀಶ ಗಡಗಿ, ಶರಣಪ್ಪ ಅಣಬಸ್ಸಿ, ಸೇರಿದಂತೆ ಹಲವರು ಇದ್ದರು.

# ವಿಶ್ವ ಏಡ್ಸ್ ದಿನಾಚರಣೆ: ಘೋಷಣೆಯೊಂದಿಗೆ ಪ್ರಭಾತ್ ಪೇರಿ

ಉದಯರಶ್ಮಿ ನ್ಯೂಸ್

ಕಲಕೇರಿ: ಈಗಿನ ಯುವ ಜನತೆ ಹಾಗೂ ಸಮುದಾಯಗಳು ಸರ್ಕಾರದ ಜೊತೆ ಕೈಜೋಡಿಸಿದರೆ ಹೆಚ್.ಐ.ವಿ ಏಡ್ಸ್ ರೋಗವನ್ನು ಇಡೀ ವಿಶ್ವದಿಂದ ತೊಲಗಿಸಬಹುದು ಇದರ ಬಗ್ಗೆ ಯುವಕರು ಅರಿಯುಕೊಳ್ಳಬೇಕು ಸರ್ಕಾರ ಇದರ ಜಾಗೃತಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎಂದು ವೈದ್ಯರಾದ ನವೀನ ಶಂಕರ ಅವರು ಮಾತನಾಡಿದರು

ಎ.ಕೆ ಸಿರಸಗಿ ಪಿ.ಯು ವಿಜ್ಞಾನ ಹಾಗೂ ಆಲಮೀನ್ ಪ್ಯಾರಾ ಮೆಡಿಕಲ್ ಕಾಲೇಜು ಹಾಗೂ ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮದಲ್ಲಿ ಅವರ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು.

ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಏಡ್ಸ್ ಜಾಗೃತಿಯ ಕುರಿತು ವಿವಿಧ ಘೋಷಣೆಗಳನ್ನು ಕೂಗುತ್ತಾ ಜಾತಾ ಹಮ್ಮಿಕೊಂಡು ನಂತರದಲ್ಲಿ ಸಿರಸಗಿ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯಕ್ರಮ ಜರುಗಿತು

ಈ ವೇಳೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಜಹಾಂಗೀರ ಸಿರಸಗಿ, ವೈದ್ಯಾಧಿಕಾ–ರಿಗಳಾದ ನವೀನ ಶಂಕರ ಹಾಗೂ ಅತಿಥಿಗಳಾಗಿ ಪ್ರಾಚಾರ್ಯರಾದ ಶಿವಾನಂದ ಸಜ್ಜನ, ಎಂ.ಜಿ.ಮೊಮಿನ ಹಾಗೂ ರೇಷ್ಮಾ ಮುಜಾವರ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಎಂ.ಡಿ ಮೊತಿಬಾಯಿ, ಆಪ್ತ ಸಮಾಲೋಚಕರದ ಸಂತೋಷ ಟೆಂಗಳಿ, ಎಸ್.ಬಿ.ಜೇವೂರ ಭಾಗವಹಿಸಿ ಏಡ್ಸ್ ಕುರಿತು ವಿಸ್ತಾರವಾಗಿ ಮಾತನಾಡಿದರು

ಈ ವೇಳೆ ಆರೋಗ್ಯ ಇಲಾಖೆಯ ಫಾರೂಕ್ ವಲ್ಲಿಬಾಯಿ, ಸಿದ್ದು ಬ್ಯಾಲ್ಯಾಳ ಸೇರಿದಂತೆ ಸಮುದಾಯ ಆರೋಗ್ಯ ಕೇಂದ್ರದ ಸಿಬ್ಬಂದಿವರ್ಗ, ಆಶಾ ಕಾರ್ಯಕರ್ತೆಯರು, ಹಾಗೂ ಕಾಲೇಜಿನ ಎಲ್ಲಾ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



# ಡಿ.3 ಡೆಕಾ ಲೇಸರ್ ಅಕಾಡೆಮಿ ಉದ್ಘಾಟನೆ

ಉದಯರಶ್ಮಿ ನ್ಯೂಸ್

ವಿಜಯಪುರ: ದೇಶದಲ್ಲಿ ಇದೇ ಮೊದಲ ಬಾರಿಗೆ ಚರ್ಮರೋಗ ತಜ್ಞರಿಗೆ ಲೇಸರಗಳ ನಿರಂತರ ತರಬೇತಿ ಮತ್ತು ಫೆಲೋಶಿಪ್ ಪ್ರೋಗ್ರಾಂ ಆಯೋಜಿಸುವ ಇಟಲಿಯ ಸಹಭಾಗಿತ್ವದ ಅಕಾಡೆಮಿಯೊಂದು ಬಸವ ನಾಡು ವಿಜಯಪುರದಲ್ಲಿ ಡಿಸೆಂಬರ್ 3 ರಂದು ಬಿ. ಎಲ್. ಡಿ. ಇ ಆಸ್ಪತ್ರೆಯಲ್ಲಿ ಆರಂಭವಾಗಲಿದೆ.

ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯ– ಡೆಕಾ ಲೇಸರ್ ಅಕಾಡೆಮಿ ಉದ್ಘಾಟನೆ ಕಾರ್ಯಕ್ರಮ ಕಾರ್ಯಕ್ರಮ ಡಿಸೆಂಬರ್ 3ರಂದು ರವಿವಾರ ಬೆಳಿಗ್ಗೆ 10 ಗಂಟೆಗೆ ಬಿ.ಎಲ್.ಡಿ.ಇ ಆಸ್ಪತ್ರೆಯ ಹೊಸ ಟ್ರಾಮಾ ಸೆಂಟರ್ ನಲ್ಲಿ ಉದ್ಘಾಟನೆ ಕಾರ್ಯಕ್ರಮ ನಡೆಯಲಿದ್ದು, ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ.ಪಾಟೀಲ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಇಟಲಿಯ ಎಲ್ ಎನ್ ಸ್ಪಾ(ಲೇಸರ್) ಗ್ರುಪ್ ಪ್ರಧಾನ ವ್ಯವಸ್ಥಾಪಕ ಡಾ. ಪಾಲೊ ಸಾಲ್ವೆಡೊ, ವಿವಿಯ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಪತಿ ಡಾ. ಆರ್. ಎಸ್. ಮುಧೋಳ, ಸಮಕುಲಪತಿ ಡಾ. ಅರುಣ ಸಿ. ಇನಾಮದಾರ, ಪ್ರಾಚಾರ್ಯ ಡಾ. ಅರವಿಂದ ವಿ. ಪಾಟೀಲ, ಕುಲಸಚಿವ ಡಾ. ಆರ್. ವಿ. ಕುಲಕರ್ಣಿ, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹೊನ್ನುಟಗಿ ಪಾಲ್ಗೊಳ್ಳಲಿದ್ದಾರೆ. ಬಿ. ಎಲ್.ಡಿ.ಇ ಡೀಮ್ಡ್ ವಿವಿಯ ಚರ್ಮರೋಗ ವಿಭಾಗದ ಆಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ಚರ್ಮರೋಗ ವಿಭಾಗದ ಮುಖ್ಯಸ್ಥ ಡಾ. ಕೇಶವಮೂರ್ತಿ ಆದ್ಯ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಲೇಸರ ಅಕಾಡೆಮಿಯ ಸ್ಥಾಪನೆಯಿಂದ ಭಾರತದ ಚರ್ಮ ರೋಗ ತಜ್ಞರಿಗೆ ಇಟಲಿಯ ಸಹಯೋಗದಲ್ಲಿ ಲೇಸರಗಳ ನಿರಂತರ ತರಬೇತಿ ನೀಡಲು ಅನುಕೂಲವಾಗಲಿದೆ. ಅಲ್ಲದೇ, ಚರ್ಮರೋಗ ಕ್ಷೇತ್ರದಲ್ಲಿ ನಡೆಯುವ ಹೊಸ ಹೊಸ ಆವಿಷ್ಕಾರಗಳು ಬಗ್ಗೆಯೂ ಮಾಹಿತಿ ವಿನಿಮಯ ನಡೆಯಲಿದೆ. ಜೊತೆಗೆ ಈ ಅಕಾಡೆಮಿಯ ಅಡಿಯಲ್ಲಿ ಲೇಸರ ವಿಷಯದಲ್ಲಿ ಫೇಲೋಶಿಪ ಪ್ರೋಗ್ರಾಂ ನಡೆಸಲು ಇದರಿಂದ ಅನುಕೂಲವಾಗಲಿದೆ.

# ದೇವರಹಿಪ್ಪರಗಿ ಪಪಂಗೆ ಪ್ರಶಸ್ತಿ ಗೌರವ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಇಲ್ಲಿನ ಪಟ್ಟಣ ಪಂಚಾಯತಿಗೆ ಸ್ವಚ್ಚತೆಯಲ್ಲಿ ರಾಜ್ಯದಲ್ಲಿ ಉತ್ತಮ ಸಾಧನೆ ಮಾಡಿರುವುದಕ್ಕಾಗಿ




ಮುನಸಿಪಾಲಿಕಾ–2023ರ ಮಹಾ ಸಮ್ಮೇಳನದಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಬೆಂಗಳೂರಿನಲ್ಲಿ ಮೂರು ದಿನಗಳಿಂದ ನಡೆಯುತ್ತಿರುವ 17ನೇ ಅಂತರಾಷ್ಟೀಯ ಮಹಾಸಮ್ಮೇಳನ ಹಾಗೂ ಪ್ರದರ್ಶನದಲ್ಲಿ ಪಟ್ಟಣಪಂಚಾಯತಿ ಮುಖ್ಯಾಧಿಕಾರಿ ಎಲ್ ಡಿ ಮುಲ್ಲಾ ಹಾಗೂ ಕಿರಿಯ ಆರೋಗ್ಯ ಅಧಿಕಾರಿ ಫಿರೋಝ ಮುಲ್ಲಾ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ರಾಜ್ಯದಲ್ಲಿ ಸ್ವಚ್ಛತೆಯಲ್ಲಿ ಸಾಧನೆ ಮಾಡಿರುವ 09 ಪಟ್ಟಣ ಪಂಚಾಯತಿಗಳಿಗೆ ಸ್ವಚ್ಛತೆ ಕುರಿತು ಸಾಕ್ಷ್ಯ ಚಿತ್ರ ಪ್ರದರ್ಶನ ಮಾಡಲು ಅವಕಾಶವೂ ಸಿಕ್ಕಿತ್ತು. ನಗರಗಳ ಭವಿಷ್ಯ, ಸುರಕ್ಷತೆ, ಚತುರತೆ ಮತ್ತು ಸಮರ್ಥನೀಯ ಕುರಿತು ನಡೆದ ಮಹಾ ಸಮ್ಮೇಳನದಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿತ್ತು.

ಪ್ರಶಸ್ತಿ ಸಿಕ್ಕ ಸಂತಸದಲ್ಲಿ ಮಾತನಾಡಿದ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಎಲ್ ಡಿ ಮುಲ್ಲಾ, ಕಳೆದ ಹಲವಾರು ವರ್ಷಗಳಿಂದ ಪಟ್ಟಣದ ಸ್ವಚ್ಛತೆಗಾಗಿ ಅತ್ಯಾಧುನಿಕ ತಂತ್ರಜ್ಞಾನ ಮೂಲಕ ಕಾರ್ಯ ಮಾಡಲಾಗುತ್ತಿದೆ. ಈ ಕುರಿತು ಹಲವಾರು ಬಾರಿ ರಾಜ್ಯ ಮಟ್ಟದ ಅಧಿಕಾರಿಗಳ ಮುಂದೆ ಪ್ರಸ್ತುತ ಪಡಿಸಲಾಗಿತ್ತು. ಸ್ವಚ್ಛತೆ ಕುರಿತು ವಿನೂತನ ವಿಶಿಷ್ಠ ರೀತಿಯಲ್ಲಿ ಯೋಜನೆ ಹಾಕಿಕೊಳ್ಳಲಾಗಿದ್ದು, ತಂತ್ರಜ್ಞಾನಗಳನ್ನು ಬಳಸಿಕೊಳ್ಳಲಾಗುತ್ತಿದೆ. ಇದರಿಂದ ಕಾರ್ಮಿಕರು ಎಲ್ಲಿ ಹೇಗೆ ಯಾವ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಾರೆ. ಜೊತೆಗೆ ಸಾರ್ವಜನಿಕರು ಸ್ವಚ್ಛತೆ ಬಗ್ಗೆ ತಿಳಿಸದರೆ ಸಾಕು ಮರುಕ್ಷಣವೇ ಅವರಿಗೆಲ್ಲ ಸಂದೇಶ ಹೋಗಿ ಕೆಲಸ ಮುಗಿದ ನಂತರವೂ ಅವರಿಂದ ಹಿಮ್ಮಾಹಿತಿಯನ್ನು ಪಡೆಯಲಾಗುತ್ತಿದೆ. ಇದೆಲ್ಲವನ್ನು ಗಮನಿಸಿ ಮುನಸಿಪಾಲಿಕಾ 2023 ಮಹಾ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಅವಕಾಶ ಸಿಕ್ಕಿತ್ತು. ರಾಜ್ಯದ ಕೇವಲ 09 ಪಂಚಾಯತಿಗಳಲ್ಲಿ ನಮ್ಮದು ಒಂದಾಗಿರುವುದು ಹೆಮ್ಮೆಯೆನಿಸಿದೆ. ಇದಕ್ಕೆಲ್ಲ ಪಟ್ಟಣ ಪಂಚಾಯತಿ ಸದಸ್ಯರು, ಸಾರ್ವಜನಿಕರ ಸಹಕಾರ ಕಾರಣವಾಗಿದೆ. ವಿಶೇಷವಾಗಿ ನಮ್ಮ ಕಾರ್ಮಿಕ ಸಿಬ್ಬಂಧಿ ಕೆಲಸದಿಂದ ಇಂದು ಈ ಮಟ್ಟದಲ್ಲಿ ಹೆಸರು ಪಡೆಯಲು ಸಾಧ್ಯವಾಗಿದೆ ಎಂದು ಸಿಬ್ಬಂಧಿ ಕಾರ್ಯವನ್ನು ಶ್ಲಾಘಿಸಿದರು.

# ಭಕ್ತಿಯ ಮೂಲಕ ದೇವರನ್ನು ಕಂಡ ಕನಕದಾಸರು

ಉದಯರಶ್ಮಿ ನ್ಯೂಸ್

ಹೊನವಾಡ: ಅನಾದಿ ಕಾಲದಿಂದಲೂ ಸಮಾಜದಲ್ಲಿ ಅಂಟುಜಾಡ್ಯದಂತೆ ಹರಡಿಕೊಂಡಿರುವ ಮೇಲು ಕೀಳೆಂಬ ವ್ಯಾಧಿಯನ್ನು ಹೋಗಲಾಡಿಸುವಲ್ಲಿ ಹಲವು ಸಾಧು–ಸಂತರು ತಮ್ಮದೇ ಆದ ಕೊಡುಗೆಯನ್ನು ನೀಡುತ್ತಲೇ ಬಂದಿದ್ದಾರೆ. ಇಂತಹವರ ಪೈಕಿ ತಮ್ಮ ಕೀರ್ತನೆಗಳ ಮೂಲಕ ಸಮಾನತೆ ಸಾರಿದಲ್ಲದೆ, ಭಕ್ತಿಯ ಮೂಲಕವೇ ದೇವರನ್ನು ಕಂಡವರು ಕನಕದಾಸರು ಎಂದು ಪ್ರಾಚಾರ್ಯರಾದ ಎಂ ಎ ಹಿರೇಮಠ್ ಮಾತನಾಡಿದರು.

ತಿಕೋಟಾ ತಾಲ್ಲೂಕಿನ ಹೊನವಾಡ ಗ್ರಾಮದ ವಿ ವಿ ಎಸ್ ಪದವಿ ಪೂರ್ವ ಕಾಲೇಜು (ಹೈಸ್ಕೂಲ್) ನಲ್ಲಿ ನಡೆದ ದಾಸ ಪರಂಪರೆಯ ಸಂತ, ಭಕ್ತ ಕನಕದಾಸರ 514ನೇ ಜಯಂತಿಯನ್ನು ಆಚರಿಸಲಾಯಿತು.

ನಮಗೆ ಇವತ್ತಿಗೂ ಭಕ್ತಿ ವಿಚಾರಕ್ಕೆ ಬಂದಾಗ ಕನಕದಾಸರ ಕಥೆಗಳು ನೆನಪಾಗುತ್ತವೆ. ಅವರು ಕೃಷ್ಣನನ್ನೇ ಜಪಿಸುತ್ತಾ ಊರೂರು ತಿರುಗಿ ಕೀರ್ತನೆಗಳ ಮೂಲಕ ಮೇಲು–ಕೀಳು ತೊಡೆದು ಮನುಷ್ಯರಾಗಿ ಬಾಳಿ ಎಂಬ ಸಂದೇಶ ಸಾರಿ ಈ ಭೂಮಿ ಮೇಲೆ ಚಿರಸ್ಥಾಯಿಯಾದವರು ಎಂದು ಸಹ ಶಿಕ್ಷಕರಾದ ಐ ಕೆ ನದಾಫ್ ಮಾತನಾಡಿದರು.

ಕೃಷ್ಣನನ್ನೇ ಒಲಿಸಿಕೊಂಡ ಅವರ ಭಕ್ತಿಗೆ ಇವತ್ತಿಗೂ ನಾವು ಕೈಮುಗಿಯಲೇಬೇಕು. ಉಡುಪಿಯ ಕೃಷ್ಣನ ಜತೆಗೆ ಕನಕನೂ ಭಕ್ತರ ಮನದಲ್ಲಿ ನೆಲೆನಿಂತು ಸಮಾಜದ ಉದ್ಧಾರಕ್ಕಾಗಿ ಶ್ರಮಿಸಿದ ಮಹಾನ್ ಸಂತ. ತನ್ನ ಭಕ್ತಿಯಿಂದಲೇ ಕೃಷ್ಣನ ದರ್ಶನ ಮಾಡಿದ ಕನಕದಾಸರು ಹಲವು ದೈವಪವಾಡವನ್ನು ಸೃಷ್ಟಿಸಿ ಭಕ್ತರಿಂದ ನಿತ್ಯ ಸೇವೆಯನ್ನು ಮಾಡಿಸಿಕೊಳ್ಳುತ್ತಿದ್ದಾರೆ. ನಮ್ಮ ನಡುವೆ ಭಕ್ತಿಗೆ ಇನ್ನೊಂದು ಹೆಸರಾಗಿದ್ದಾರೆ ಕನಕದಾಸರು

ಸಮಾಜದ ಅಂಕು–ಡೊಂಕುಗಳನ್ನು ತಿದ್ದುವ ಸಲುವಾಗಿ ಲೋಕ ಸಂಚಾರ ಹೊರಟ ಅವರು, ದರ್ಶನ ನೀಡದ ಊರುಗಳಿಲ್ಲ ಎಂದು ಧರೆಪ್ಪ ಸಿದ್ನಾಥ ಮಾತನಾಡಿದರು.

ಕಾರ್ಯಕ್ರಮದಲ್ಲಿ ವೇದಿಕೆಯ ಮೇಲೆ ಸಂಸ್ಥೆಯ ಅಧ್ಯಕ್ಷರಾದ ನಳಿನಿಕಾಂತ ಸಾವಂತ ಎಸ್ ಜಿ ಲಕ್ಕುಂಡಿಮಠ ಸಹ ಶಿಕ್ಷಕರಾದ ಎಂ ಜಿ ಕುಲಕರ್ಣಿ ದೈಹಿಕ ಶಿಕ್ಷಕರಾದ ಮಮತಾ ಹಿರೇಮಠ್ ನವೀನ್ ಹಿರೇಮಠ್ ಮಂಜುನಾಥ್ ಪಾತ್ರೋಟ ನಿವೇದಿತಾ ಹಿರೇಮಠ್ ಸಂಸ್ಥೆಯ ಆಡಳಿತ ಮಂಡಳಿ ಸಿಬ್ಬಂದಿ ವರ್ಗ ಮತ್ತಿತರರು ಇದ್ದರು.



# ಮನೆಗಳ ಕಾಮಗಾರಿಗೆ ಶಾಸಕ ನಾಡಗೌಡ ಚಾಲನೆ



ಉದಯರಶ್ಮಿ ನ್ಯೂಸ್

ತಾಳಿಕೋಟಿ: ಪ್ರಧಾನ ಮಂತ್ರಿ ಆವಾಸ್ ಯೋಜನೆ ಹೌಸಿಂಗ್ ಫಾರ್ ಆಲ್ ಹಾಗೂ ರಾಜ್ಯ ಸರ್ಕಾರದ ವಸತಿ ಯೋಜನೆಗಳ ಸಹ ಯೋಜನೆಯೊಂದಿಗೆ ನಿರ್ಮಿಸುತ್ತಿರುವ 600 ( ಜಿ+3) ಗುಂಪು ಮನೆಗಳ ನಿರ್ಮಾಣ ಕಾಮಗಾರಿಗೆ ಶಾಸಕ ಸಿ. ಎಸ್. ನಾಡಗೌಡ ಅವರು ಭೂಮಿ ಪೂಜೆ ನೆರವೇರಿಸಿದರು.

ಬುಧವಾರ ಪಟ್ಟಣದ ಹರನಾಳ ರಸ್ತೆಯ ಪಕ್ಕದಲ್ಲಿ ನಿರ್ಮಾಣಗೊಳ್ಳಲಿರುವ ನಿವೇಶನದಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ಹಾಗೂ ತಾಳಿಕೋಟಿ ಪುರಸಭೆ ಇವರ ಆಶ್ರಯದಲ್ಲಿ ಹಮ್ಮಿಕೊಂಡ ಸಮಾರಂಭದಲ್ಲಿ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಈ ಬಡಾವಣೆ ಆಧುನಿಕ ತಂತ್ರಜ್ಞಾನದಿಂದ ನಿರ್ಮಾಣ ಗೊಳ್ಳಲಿದ್ದು ಸಕಲ ಸೋಲತ್ತುಗಳನ್ನು ಹೊಂದಿರುವ ಒಂದು ಸುಂದರವಾದ ಬಡಾವಣೆ ಆಗಲಿದೆ ಇದು ತಾಳಿಕೋಟಿ ಪಟ್ಟಣದ ಉಪನಗರದಂತೆ ಆಗುವುದು ಈ ಕಾಮಗಾರಿಯು ಅತ್ಯುತ್ತಮ ರೀತಿಯಲ್ಲಿ ಮುಕ್ತಾಯವಾಗಬೇಕಾದರೆ ನಿಮ್ಮೆಲ್ಲರ ಸಹಕಾರ ಅಗತ್ಯವಾಗಿದೆ ಸಣ್ಣಪುಟ್ಟ ಏನಾದರೂ ತೊಂದರೆ ಹಾಗೂ ಸಮಸ್ಯೆಗಳು ಇದ್ದರೆ ಅಧಿಕಾರಿಗಳಿಂದ ಮಾಹಿತಿ ಪಡೆದು ಬಗೆಹರಿಸಿಕೊಳ್ಳಿ ಈ ಮನೆಗಳು ನಿರ್ಮಾಣವಾದಾಗ ತಾವು ತಮ್ಮ ನೂತನ ಮನೆಯಲ್ಲಿ ನೆಮ್ಮದಿ ಯ ಬದುಕು ನೆಡಸಿ ಎಂದು ಹಾರಿಸುತ್ತೇನೆ ಎಂದರು. ವೇದಿಕೆಯಲ್ಲಿ ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹಮದ್ ಖಾಜಿ. ಕಾಂಗ್ರೆಸ್ ಮುಖಂಡ ಪ್ರಭುಗೌಡ ಮದರ್ಕಲ್. ಚಿನ್ನು ಧಣಿ ಬಸರ ಕೋಡ. ವಿರುಪಾಕ್ಷಯ್ಯ ಹಿರೇಮಠ. ಬಾಬುರಾವ್ ಸಿಂಧೆ. ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಸಿದ್ದನಗೌಡ ಪಾಟೀಲ. ವಿಜಯ ಸಿಂಗ್ ಹಜೇರಿ .ಚಿನ್ನಪ್ಪ ಮಾಳಿ. ಸಂಗನಗೌಡ ಅಸ್ಕಿ .ಪುರಸಭೆ ಸದಸ್ಯರಾದ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ. ಡಿ .ವಿ. ಪಾಟೀಲ. ಮುತ್ತಪ್ಪಣ್ಣ ಚಮಲಾಪೂರ. ಪರಶುರಾಮ ತಂಗಡಗಿ. ಮುಸ್ತಫಾ ಚೌಧರಿ .ಹುಸೇನ ಜಮಾದಾರ. ಆದ–'ಮಶಾ ಮಕಾನದಾರ. ಗನಿಸಾಬ ಲಾಹೋರಿ. ಅಬ್ದುಲ್ ರೆಹಮಾನ ಸಾಬ ಯಕೀನ. ಇಬ್ರಾಹಿಂ ಮನ್ಸೂರ. ಮೆಹಬೂಬ ಕೆಂಭಾವಿ .ಫಯಾಜ್ ಉತ್ನಾಳ.ನಬಿಸಾಬ ಹುಣಶ್ಯಾಳ

ಪುರಸಭೆ ಮುಖ್ಯ ಅಧಿಕಾರಿ ಮೋಹನ ಜಾಧವ ಗುತ್ತಿಗೆದಾರ ಅಶ್ಪಾಕ್ ಬೆಟಗೇರಿ ಇಲಾಖೆ ಅಧಿಕಾ–ರಿಗಳು. ಫಲಾನುಭವಿಗಳು ಹಾಗೂ ಮತ್ತಿತರರು ಇದ್ದರು.

ರುದ್ರಮುನಿ ಮಹಾಸ್ವಾಮಿಗಳ 17ನೇ ಪುಣ್ಯಾರಾಧನೆ | ಡಾ.ವಿಶ್ವರಾಧ್ಯ ಶಿವಾಚಾರ್ಯ ಕರೆ

# ತ್ಯಾಗ, ಸಂಯಮ ಗುಣ ಅಳವಡಿಸಿಕೊಳ್ಳಿ

ಉದಯರಶ್ಮಿ ನ್ಯೂಸ್

ಬ್ರಹ್ಮದೇವನಮಡು: ನೂರಂದೇಶ್ವರ ಕಲ್ಯಾಣ ಮಠದ ಲಿಂಗೈಕ್ಯ ರುದ್ರಮುನಿ ಸ್ವಾಮಿಗಳ ನಡೆ ನುಡಿ ಹಾಗೂ ಭಕ್ತಿಯನ್ನು ಅರ್ಪಣೆ ಮಾಡಿಕೊಂಡವರಾಗಿದ್ದರು. ಅವರ ತತ್ವಾದರ್ಶಗಳು ಅಧ್ಯಾತ್ಮದ ಸಿದ್ಧಾಂತದಿಂದ ಕೂಡಿದ್ದವು ಎಂದು ಶಿವಾಚಾರ್ಯ ರತ್ನ ಪ್ರಶಸ್ತಿ ಪುರಸ್ಕತ ಮಾಗಣಗೇರಾದ ಬೃಹನ್ಮಠದ ಡಾ.ವಿಶ್ವರಾಧ್ಯ ಶಿವಾಚಾರ್ಯರು ಹೇಳಿದರು.

ಸಮೀಪದ ಸುಕ್ಷೇತ್ರ ಹಿರೇಅಲ್ಲಾಪೂರ ಗ್ರಾಮದಲ್ಲಿ ಈಚೆಗೆ ನೂರಂದೇಶ್ವರ ಕಲ್ಯಾಣ ಮಠದ ಲಿಂಗೈಕ್ಯ ರುದ್ರಮುನಿ ಸ್ವಾಮಿಗಳ 17ನೇ ಪುಣ್ಯಾರಾಧನೆ ಹಾಗೂ ದ್ವಾರಬಾಗಿಲು ಉದ್ಘಾಟನೆ,ಲಿಂಗೈಕ್ಯ ಶರಣಮ್ಮ ತಾಯಿಯವರ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. ರುದ್ರಮುನಿ ಸ್ವಾಮಿಗಳು ಐಹಿಕ ಸುಖ ಜೀವನಕ್ಕಾಗಿ ಆಸ್ತಿಯನ್ನು ಸಂಪಾದಿಸದೆ ಭಕ್ತರನ್ನೇ ಸಮಾಜದ ಆಸ್ತಿಯನ್ನಾಗಿ ನಿರ್ಮಾಣ ಮಾಡುವ ಶಕ್ತಿಯನ್ನು ಹೊಂದಿದ್ದರು. ಸಮಾಜದಲ್ಲಿ ನಾವು ನಡೆಯುವ ನಡವಳಕೆ ಹಾಗೂ ಆಲೋಚನೆಗಳು ಸೂಕ್ಷ್ಮತೆಯಿಂದ ಕೂಡಿದಾಗ ಮಾತ್ರ ನಮ್ಮನ್ನು ಸಮಾಜ ಒಪ್ಪಿಕೊಳ್ಳಲು ಸಾಧ್ಯ.ತ್ಯಾಗ, ಸಧೃಢತೆ, ಸಂಯಮವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಈ ವೇಳೆ ಚಿಟಗುಂಪುದ ಗುರುಲಿಂಗ ಶಿವಾಚಾರ್ಯರು, ಯಂಕಂಚಿ ಹಿರೇಮಠದ ಅಭಿನವ ರುದ್ರಮುನಿ ಶಿವಾಚಾರ್ಯರು,ಶ್ರೀಮಠದ ಒಡೆಯ ಮಲ್ಲಯ್ಯ ಸ್ವಾಮಿಜಿ,ಬಿಜೆಪಿ ಮುಖಂಡ ಸಂತೋಷ ಪಾಟೀಲ ಡಂಬಳ,ಕಾಂಗ್ರೆಸ್ ಯುವ ಮುಖಂಡ ಶಿವು ಹತ್ತಿ, ಕಾಂಗ್ರೆಸ್ ಮುಖಂಡ ಮುರಿಗೇಪ್ಪಗೌಡ ರದ್ದೇವಾಡಗಿ, ಶ್ರೀಶೈಲ್ ಚಳ್ಳಗಿ, ಸಂಕಪ್ಪಗೌಡ ಪಾಟೀಲ, ಪ್ರಭಯ್ಯ ಹಿರೇಮಠ, ಯಶವಂತಪ್ಪಗೌಡ ಬಿರಾದಾರ, ಗೊಲ್ಲಾಳಯ್ಯ ಹಿರೇಮಠ, ಬಸಪ್ಪಭಯ್ಯ ಹಿರೇಮಠ, ನಾಗಯ್ಯ ವಿರಕ್ತಮಠ ಸೇರಿದಂತೆ ನೂರಾರು ಭಕ್ತರು ಪಾಲ್ಗೊಂಡಿದ್ದರು.

ಸೋಮವಾರ ಬೆಳಗ್ಗೆ ಲಿಂ.ರುದ್ರಮುನಿ ಶಿವಾಚಾರ್ಯ ಕರ್ತೃಗುದ್ದಗೆಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ರಾತ್ರಿ ಭಕ್ತರಿಗೆ ಭಜಿ ರೊಟ್ಟಿ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಇಡೀ ರಾತ್ರಿ ಹಿರೇಅಲ್ಲಾಪೂರ ಗ್ರಾಮದ ಶ್ರೀ ದೇವಿ ಭಜನಾ ಮಂಡಳಿಯಿಂದ ಭಜನೆ ಕಾರ್ಯಕ್ರಮ ನಡೆಯಿತು.



# ದೈಹಿಕ ಶಿಕ್ಷಕರ ಸಂಘದ ಪದಾಧಿಕಾರಿಗಳ ಆಯ್ಕೆ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ತಾಲೂಕಿನ ನೂತನ ದೈಹಿಕ ಶಿಕ್ಷಕರ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಗೌರವ ಅಧ್ಯಕ್ಷರಾಗಿ ಸಿ .ಎಸ್ .ಮನಗೂಳಿ, ಅಧ್ಯಕ್ಷರಾಗಿ ಎಸ್. ಎಸ್. ಲಮಾಣಿ, ಕಾರ್ಯದರ್ಶಿಯಾಗಿ ಎಂ. ಎಸ್.ನಾಟೆಕಾರ್, ಖಜಾಂಚಿಯಾಗಿ ಜಿ.ಎಂ.ಸಾಲಿಮಠ , ಹಿರಿಯ ಉಪಾಧ್ಯಕ್ಷರಾಗಿ ವಿ.ಜಿ.ನಾಗರಾಳ, ಉಪಾಧ್ಯಕ್ಷರಾಗಿ ಸುಭಾಷ್ ಒ. ಮತ್ತು ಬಿ.ಎ .ವಂದಾಲ್, ಜಂಟಿ ಕಾರ್ಯದರ್ಶಿಯಾಗಿ ಶ್ರೀಮತಿ ರುದ್ರಮ್ಮ ಟಕ್ಕಳಕಿ, ಮತ್ತು ಸಂಜೀವ್ ರಾಥೋಡ್, ಸಂಘಟನಾ ಕಾರ್ಯದರ್ಶಿಯಾಗಿ ಎಸ್. ಎಸ್ .ಅಂಗಡಿ, ಎಸ್.ಎಂ.ಇದ್ದಲಗಿ, ಮತ್ತು ಬಿ.ಎಸ್ .ರಾಮೋಡಗಿ, ಕ್ರೀಡಾ ಕಾರ್ಯದರ್ಶಿಯಾಗಿ ಬಿ.ಟಿ. ಬಜಂತ್ರಿ, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ವಿ.ವಿ. ಗದಗ, ಪತ್ರಿಕ ಕಾರ್ಯದರ್ಶಿಯಾಗಿ ಜೆ .ಎಸ್. ನಾಡಗೌಡರು, ಆಂತರಿಕ ಲೆಕ್ಕ ಪರಿಶೋಧಕರಾಗಿ ಬಿ.ಎಸ್. ಪಣದಕಟ್ಟಿ ಅವರನ್ನು ಆಯ್ಕೆ ಮಾಡಲಾಯಿತು.

ಈ ವೇಳೆ ಹಿರಿಯ ದೈಹಿಕ ಶಿಕ್ಷಣ ಶಿಕ್ಷಕರಾದ ಎಚ್. ಎಲ್. ಕರಡ್ಡಿ, ಬಿ ಕೆ .ನಾಯಕ, ಎ.ಸಿ. ಕೆರೂರ, ಎಸ್. ಟಿ ಸಜ್ಜನ್ ಎಸ್.ಆರ್. ಸುಲ್ಪಿ , ವಿ .ಎಸ್.ತೆಗ್ಗಿ ಸೇರಿದಂತೆ ಮತ್ತೀತರರು ಇದ್ದರು.

# ಬಸವಸೈನ್ಯದಿಂದ ಕನಕದಾಸ ಜಯಂತಿ ಆಚರಣೆ



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಪಟ್ಟಣದ ಚನ್ನಮ್ಮ ವೃತ್ತದಲ್ಲಿ ರಾಷ್ಟ್ರೀಯ ಬಸವಸೈನ್ಯದಿಂದ ಭಕ್ತ ಕನಕದಾಸ ಜಯಂತಿ ಆಚರಿಸಲಾಯಿತು.

ವಿಶ್ವಮಾನವ ಕಲ್ಪನೆ ಹೊಂದಿದ ಮಾನವೀಯ ಗುಣಗಳನ್ನು ಪ್ರತಿಪಾದಿಸಿ ಸಮಾನತೆಯ ಸಂದೇಶವನ್ನು ಭಕ್ತ ಕನಕದಾಸರು ಸಾರಿದ್ದಾರೆ ಎಂದು ರಾಷ್ಟ್ರೀಯ ಬಸವ ಸೈನ್ಯದ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ ಹೇಳಿದರು.

ಪಟ್ಟಣದ ಕಿತ್ತೂರಾಣಿ ಚೆನ್ನಮ್ಮ ವೃತ್ತದಲ್ಲಿ ಗುರುವಾರ ದಾಸ ಶ್ರೇಷ್ಠ ಕನಕದಾಸರ 536 ನೆಯ ಜಯಂತೋತ್ಸವದ ಪ್ರಯುಕ್ತ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಕನಕದಾಸರು ರಚಿಸಿರುವ ರಾಮಧಾನ್ಯ ಚರಿತ ಸೇರಿದಂತೆ ಹಲವಾರು ಸಾಹಿತ್ಯಗಳು ನಮಗೆ ದಾರಿದೀಪ. ಅವರ ತತ್ವಾದರ್ಶಗಳು ಇಂದಿಗೂ ಪ್ರಸ್ತುತ. ಅವುಗಳ ಮೂಲಕ ಸಮಾಜದಲ್ಲಿ ಶಾಂತಿ, ಸಮಾನತೆ ಪ್ರಗತಿ ಸಾಧಿಸಲು ಸಾಧ್ಯವಿದೆ. ತಮ್ಮ ಸಮಾಜಸತ್ವವನ್ನು ಬಿಟ್ಟು ಅವರು ದಾಸ ಶ್ರೇಷ್ಠರಾಗಿದ್ದಾರೆ ಎಂದು ಹೇಳಿದರು.

ದಾಸ ಸಾಹಿತ್ಯಕ್ಕೆ ಬಹಳ ದೊಡ್ಡ ಕೊಡುಗೆ ನೀಡಿದ ತತ್ವಜ್ಞಾನಿ. ದಾಸ ಪದ ಹಾಡಿ ಜೀವನದ ಸಾರವನ್ನು ತಿಳಿಸಿದರು .ಕುಲ ಕುಲ ಕುಲವೆಂದು ಬಡಿದಾಡದಿರಿ, ನಿಮ್ಮ ಕುಲದ ನೆಲೆಯನಾದರೂ ಬಲ್ಲಿರಾ ಎಂದು ಮಾರ್ಮಿಕವಾಗಿ ತಿಳಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಶ್ರೀಕಾಂತ ಕೊಟ್ರಶೆಟ್ಟಿ, ನಿಂಗಪ್ಪ ಅವಟಿ ,ಸುನಿಲ ಚಿಕ್ಕೊಂಡ, ಮನಾನ್ನ ಶಾಬಾದಿ ,ಪ್ರಶಾಂತ ಮುಂಜಾನೆ, ಮಾಂತೇಶ ಹೆಬ್ಬಾಳ, ಶಂಕರಸಿಂಗ ರಜಪೂತ, ಜಟ್ಟಿಂಗರಾಯ ಮಾಲಗಾರ, ವೆಂಕಟೇಶ ಕರಾಡೆ, ಶ್ರೀಧರ ಕುಂಬಾರ, ಸಂಜೀವ ಬಿರಾದಾರ, ಸುರೇಶ ದೇಸಾಯಿ, ಸಿದ್ದು ಜಂಬಲದಿನ್ನಿ, ಅಪ್ಪು ಸಂಗಮ, ಮಹೇಶ ಪತ್ತಾರ ಇತರರು ಇದ್ದರು.

## ಮೋರಟಗಿಯಲ್ಲಿ ಧರ್ಮಸಭೆ । ಶಾಸಕ ಅಶೋಕ ಮನಗೂಳಿ ಅಭಿಮತ

# ಶರಣರ ಆದರ್ಶಗಳು ಮಾನವ ಕುಲಕ್ಕೆ ದಾರಿದೀಪ

**ಉದಯರಶ್ಮಿ ನ್ಯೂಸ್**



ಮೋರಟಗಿ: ಶಿಕ್ಷಣ ಶಾಲೆಯಲ್ಲಿ ಸಿಕ್ಕರೆ, ಸಂಸ್ಕಾರ ಎನ್ನುವುದು ಧರ್ಮಸಭೆಯಲ್ಲಿ ಸಿಗುತ್ತದೆ, ಗುಡಿ ಗೋಪುರ ಮಠಮಾನ್ಯಗಳು ಸಂತರು ಶರಣರು ಮಾನವ ಕುಲಕ್ಕೆ ಕೊಟ್ಟಂತ ಆದರ್ಶ ನಮ್ಮೆಲ್ಲರ ಬದುಕಿಗೆ ದಾ–ರಿದೀಪ ಎಂದು ಶಾಸಕ ಅಶೋಕ ಮನಗೂಳಿ ಅಭಿಮತ ವ್ಯಕ್ತಪಡಿಸಿದರು.

ಗ್ರಾಮದ ಆರಾಧ್ಯದೇವ ಶ್ರೀ ಸಿದ್ದರಾಮೇಶ್ವರ ಜಾತ್ರಾ ಪ್ರಯುಕ್ತ ಹಮ್ಮಿಕೊಂಡ ಧರ್ಮಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಕಂಪ್ಯೂಟರ ಯುಗದಲ್ಲಿ ಯವಕರು ಮುಬೈಲ ಗಿಳಯ ಹಿಂದೆ ಬಿದ್ದು ಸುಂದರ ಜೀವನವನ್ನೇ ಹಾಳುಮಾಡಿಕೊಳ್ಳುತ್ತಿದ್ದು ನೋಡಿದರೆ ಇತ್ತೀಚಿನ ದಿನಗಳಲ್ಲಿ ಜಾತ್ರೆ, ಧಾರ್ಮಿಕ ಕಾರ್ಯಕ್ರಮಗಳು, ಸಂಸಾರಿಕ ಬಯಲಾಟ ನಾಟಕಗಳು ಮರೆತಂತಾಗಿದೆ ಆದರೆ ಮೋರಟಗಿ ಗ್ರಾಮದಲ್ಲಿ ಅಮವಾಸೆ ಹುಣ್ಣಿಗೆಗೊಂದು ದೇವರುಗಳ ಜಾತ್ರೆ ಮಾಡುವುದರ ಜೊತೆಗೆ ಧಾರ್ಮಿಕ ಸಭೆಗಳು ರಸಮಂಜರಿ ಕಾರ್ಯಲ್ರಮಗಳು ಜರುಗುತ್ತಿರುವುದು ಸಂತಸದ ಸಂಗತಿ ಯುವಕರು ಶಿಕ್ಷಣ ಪಡೆಯುದರ ಜೊತೆಗೆ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಆದರ್ಶ ವ್ಯಕ್ತಿಗಳಾಗಿ ಬದುಕಿ ತಮ್ಮ ಪಾಲಕರು ಕಂಡ ಕನಸು ನನಸಾಗಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಷ.ಬ್ರ. ಡಾ, ರುದ್ರಮುನಿ ಶಿವಾಚಾರ್ಯರು ಮಡಿವಾಳೇಶ್ವರ ಮಠ ಕಡಕೋಳ ಸಾನಿಧ್ಯ ವಹಿಸಿದ್ದರು, ಮಾಜಿ ಜಿ.ಪಂ.ಸದಸ್ಯ ಎನ್.ಆರ್.ತಿವಾರಿ, ಕಾಂಗ್ರೇಸ್ ಮುಖಂಡರುಗಳಾದ ಅರವಿಂದ ಹಂಗರಗಿ, ರವಿಕಾಂತ ನಡುವಿನಕೇರಿ, ನಿಂಗನಗೌಡ ಪಾಟೀಲ, ಇನಾಯತ ದೊಡಮನಿ ಸಲೀಮ್ ಕಣ್ಣಿ, ಇಸೂಫ್ ಮುಲ್ಲಾ, ಬಂದೇನವಾಜ ಕಣ್ಣಿ, ಇರಣ್ಣ ಬಡಿಗೇರ, ಸೇರಿದಂತೆ ಸಮಸ್ತ ಶ್ರೀ ಸಿದ್ದರಾಮೇಶ್ವರ ಭಕ್ತಾಧಿಗಳು ಇದ್ದರು.

> ನಮ್ಮ ತಂದೆ ಮಾಜಿ ಸಚಿವ ದಿ.ಎಂ.ಸಿ.ಮನಗೂಳಿ ಅವರು ಕಾರ್ಯಕ್ರಮದಲ್ಲಿ ಈ ದೇವಸ್ಥಾನಕ್ಕೆ ಕಲ್ಯಾಣ ಮಂಟಪ ನಿರ್ಮಿಸಿ ಕೊಡುತ್ತೇನೆ ಎಂದು ಭರವಸೆ ನೀಡಿದ್ದರು ಆ ನಿಟ್ಟಿನಲ್ಲಿ ನಾನು ಶಾಸಕನಾದ ಕೂಡಲೇ ಈ ದೇವಸ್ಥಾನಕ್ಕೆ ಕಲ್ಯಾಣ ಮಂಟಪ ನಿರ್ಮಾಣಕ್ಕಾಗಿ ಸರಕರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇನೆ ಇನ್ನೆರಡು ತಿಂಗಳಲ್ಲಿ ಕಂಡಿತವಾಗಿ ಮಂಜೂರಾತಿ ಸಿಗಲಿದೆ ಮತ್ತು ಇನ್ನುಳಿದ ದೇವಸ್ಥಾನಗಳ ಮಠ ಮಂದಿರ ಮಸೀದಿಗಳ ಅಭಿವೃದ್ದಿಗೂ ಕೂಡಾ ಶ್ರಮಿಸುತ್ತೇನೆ.
>
> **– ಅಶೋಕ ಮನಗೂಳಿ, ಶಾಸಕರು ಸಿಂದಗಿ**

## ಕಾವ್ಯರಶ್ಮಿ

("ನಮ್ಮ ಕಥಾ ಅರಮನೆ" ಬರಹಗಾರರು)

## ಒಡಪು: "ತಿಲಕ"




ಗಗನಕೆಂದೇ ತಿದ್ದಿ ತೀಡಿದ ಬೊಟ್ಟಲ್ಲವೆ ರವಿ
ಶಶಿಯನೆ ಕುಂಕುಮವಾಗಿ ಧರಿಸಿಲ್ಲವೆ ಭುವಿ
ನನ್ನೊಸಲಿನ ಸಿಂಧೂರ ತಿಲಕವಲ್ಲವೇ ಸೀನು
ಹಣೆಯಲಿ ಸದಾ ನೀನಿರೆ ಶೋಭಿಸುವೆ ನಾನು.

**– ಲಕ್ಷ್ಮೀ ಸೀನು.**



ಕಾರ್ಯಸಾಧನೆಗೆ ಅವಳ ತಿಳಿನಗುವೇ ಸಹಾಯಕ
ಕ್ಲಿಷ್ಟ ಸಮಯದಲಿ ಅವಳ ಗಟ್ಟಿ ಬೆಂಬಲವೇ ಪ್ರೇರಕ
ಅವಳ ತ್ಯಾಗ ಅನುರಾಗದಿಂದಲೇ ನಾನಾದೆ ಸಾಧಕ
ವಿಜಯಲಕ್ಷ್ಮಿ ಹೆಮ್ಮೆಯಲಿ ರಾರಾಜಿಸುವ ಹಣೆತಿಲಕ

**– ವೆಂಕಟಕೃಷ್ಣ ಕೆ.**



ಆ ಬಾನಿನಂಗಳಕೆ ಭೂಷಣ
ಫಳ ಫಳನೆ ಹೊಳೆವ ಅರ್ಕ
ಈ ನೊಸಲಿನಂದಕೆ ಕಾರಣ
ನಾಗರಾಜ್ ರಾಯರಿಟ್ಟ ತಿಲಕ...!

**–ಉಮಾ ನಾಗರಾಜ್.**



ಸ್ವಾತಂತ್ರ್ಯ ಹೋರಾಟಗಾರರಲ್ಲಿ ಪ್ರಸಿದ್ಧರಾದವರು ಬಾಲಗಂಗಾಧರ ತಿಲಕ, ಹನುಮಂತನಿಗೆ ಶ್ರೇಷ್ಠವಾದದು ಕೇಸರಿ ತಿಲಕ, ಪ್ರಶಾಂತರಾಯರಿಗೆ ಹಚ್ಚುವೆನು ಕುಂಕುಮ ತಿಲಕ....

**– ಮೊನಿಕಾ ಕುಲಕರ್ಣಿ**



ನಿಮ್ಮ ಹೆಸರಿಗೆ ನನ್ನುಸಿರು ಸೇರಿದ ಮುದ್ರೆಯೇ ತಿಲಕ
ಎನ್ನ ಲಲಾಟದಲ್ಲದು ಸದಾ ಶೋಭಿಸುತ್ತಿರಲೆಂಬ ತವಕ
ವೆಂಕಟೇಶ ರಾಯರೇ ನೀವು ನನ್ನ ಜೀವನದ ಗಮಕ
ಬಾಳ ಪುಟಗಳಲ್ಲಿ ನಾವಿಬ್ಬರೂ ಒಂದಾದ ದ್ಯೋತಕ.

**– ಸಾಧನಾ ವೆಂಕಟೇಶ್.**

## ಪ್ರಶಸ್ತಿ ಪುರಸ್ಕೃತ ಪತ್ರಕರ್ತರಿಗೆ ಕೆಯುಡಬ್ಲ್ಯೂಜೆ ಅಭಿನಂದನೆ

# ಪತ್ರಕರ್ತರು ವೃತ್ತಿಬದ್ಧತೆ ಕಾಪಾಡಬೇಕು :ಹೊರಟ್ಟಿ

**ಉದಯರಶ್ಮಿ ನ್ಯೂಸ್**




ಬೆಂಗಳೂರು: ಪತ್ರಕರ್ತರು ಸಮಾಜದ ಮತ್ತು ಸರ್ಕಾರದ ಅಂಕು–ಡೊಂಕುಗಳನ್ನು ತಿದ್ದುವವರಾಗಿದ್ದು, ವೃತ್ತಿ ಬದ್ದತೆ ಕಾಪಾಡಿಕೊಳ್ಳುವಂತೆ ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಕರೆ ನೀಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ವತಿಯಿಂದ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿ ಅವರು ಮಾತನಾಡಿದರು.

ಈ ಬಾರಿ ಸಮರ್ಥ ಪತ್ರಕರ್ತರಿಗೆ ಪ್ರಶಸ್ತಿಗಳು ಅರಸಿ ಬಂದಿರುವುದು ನಿಜಕ್ಕೂ ಶ್ಲಾಘನೀಯ. ಪತ್ರಕರ್ತರು ದಿಟ್ಟತನದಿಂದ ಕಾರ್ಯ ನಿರ್ವಹಿಸಬೇಕಾದುದು ಅತ್ಯಗತ್ಯ. ಹಾಗಾಗಿ ಸಮರ್ಥರಿಗೆ ಮನ್ನಣೆ ನೀಡಬೇಕಾದುದು ಎಲ್ಲರ ಕರ್ತವ್ಯ ಎಂದರು.

ನಾನು ಸದನಕ್ಕೆ ಬಂದ ಹೊಸದರಲ್ಲಿ ಏನೇನು ತಪ್ಪು ಮಾಡಿದೆ ಎನ್ನುವುದನ್ನು ಹಿರಿಯ ಪತ್ರಕರ್ತರೇ ತಿದ್ದಿ ಹೇಳುತ್ತಿದ್ದರು. ಹಾಗಾಗಿ ಬಹಳ ಕಲಿಯಲು ಸಾಧ್ಯವಾಯಿತು. ವೃತ್ತಿಪರವಾಗಿ ಅಷ್ಟು ಪ್ರಭುದ್ಧತೆ ಪತ್ರಕರ್ತರಿಗೆ ಇರಬೇಕು ಎಂದರು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಮಾತನಾಡಿ, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘವು ವೃತ್ತಿ ಭಾಂದವರ ಬಗ್ಗೆ ತೋರುತ್ತಿರುವ ಕಾಳಜಿಯು ನಿಜಕ್ಕೂ ಸ್ತುತ್ಯಾರ್ಹ. ಪತ್ರಿಕಾ ವಿತರಕರನ್ನೂ ಸರ್ಕಾರ ಈ ಬಾರಿ ಗುರುತಿಸಿ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ಅಪಘಾತದಲ್ಲಿ ಮೃತಪಟ್ಟವ–ರಿಗೆ ಮತ್ತು ಆಸ್ಪತ್ರೆಗೆ ಸೇರಿದವರಿಗೆ ನೆರವು ನೀಡುವ ಯೋಜನೆ ಜಾರಿಗೆ ತರಲಾಗಿದೆ ಎಂದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪತ್ರಕರ್ತರಾದ ಮಾಯಾ ಶರ್ಮಾ, ಸುದ್ದಿಮನೆಯ ಹಿರಿಯ ಸುಬ್ಬು ಹೊಲೆಯಾರ್ ಮಾತನಾಡಿ, ವೃತ್ತಿಪರವಾದ ಕೆಯುಡಬ್ಲ್ಯೂಜೆ ಸಂಸ್ಥೆಯಲ್ಲಿ ನಮಗೆ ಗೌರವಿಸುತ್ತಿರುವುದು ಸಂತೋಷದ ಸಂಗತಿ ಎಂದರು.


ಪತ್ರಕರ್ತ ರಫೀಕ್ ಭಂಡಾರಿ, ಪತ್ರಿಕಾ ವಿತರಕರಾದ ಜವರಪ್ಪ ಅವರನ್ನು ಗೌರವಿಸಲಾಯಿತು.

ವಿಧಾನ ಪರಿಷತ್ ಸಭಾಪತಿಗಳ ವಿಶೇಷಾಧಿಕಾರಿ ಡಾ. ಮಹೇಶ್ ವಾಳ್ವೇಕರ್, ಸ್ಪೀಕರ್ ಕಚೇರಿಯ ಸಂಯೋಜಕರಾದ ಜ್ಞಾನಶೇಖರ್ ಅವರನ್ನೂ ಈ ಸಂದರ್ಭದಲ್ಲಿ ಅಭಿನಂದಿಸಲಾಯಿತು.

ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಪ್ರಾಸ್ತಾವಿಕವಾಗಿ ಮಾತನಾಡಿ, ಕಾರ್ಯನಿರತ ಪತ್ರಕರ್ತರ ಸಂಘವು ಪತ್ರಕರ್ತರ ಕ್ಷೇಮಾಭಿವೃದ್ಧಿಗೆ ಬದ್ಧವಾಗಿ ಕೆಲಸ ಮಾಡುತ್ತದೆ. ವೃತ್ತಿ ನಿರತರನ್ನು ಕೆಯುಡಬ್ಲ್ಯೂಜೆ ಅಂಗಳದಲ್ಲಿ ಸನ್ಮಾನಿಸುತ್ತಿರುವುದು ಅಭಿಮಾನದ ಸಂಗತಿ ಎಂದರು.

ಸಮಾರಂಭದಲ್ಲಿ ರಾಜ್ಯ ಸಂಘದ ಕಾರ್ಯದರ್ಶಿ ನಿಂಗಪ್ಪ ಚಾವಡಿ, ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ, ಖಜಾಂಚಿ ವಾಸುದೇವ ಹೊಳ್ಳ ಮತ್ತಿತರರಿದ್ದರು.

# ಮುಖವಾಡ



## ಭಾವರಶ್ಮಿ

– ಶಾರದಾ ಗುಂಡೂರಾವ್
("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

ಅಮ್ಮ.... ನನಗ್ಯಾಕೋ ಶೀತನೇ ಕಡಿಮೆಯಾಗಿಲ್ಲ... ನನ್ನಿಂದ ಮಗೂಗೂ ಶೀತ ಆಗುತ್ತಾ.... ರಮ್ಯಾಳ ಮಾತಿಗೆ ಅಮ್ಮ ದಮಯಂತಿ ಅಲ್ಲಕಣೇ ನಾಡಿದ್ದು ಹೇಗೂ ಬೆಂಗಳೂರಿಗೆ ಅತ್ತೆ ಮನೆಗೆ ಹೋಗುತ್ತಿರುವೆ. ಈ ಹಳ್ಳಿಯಲ್ಲಿ ಯಾವ, ಡಾಕ್ಟರ್ ಇದ್ದಾರೆ..ನಾನಂತೂ ನಂಗೆ ಗೊತ್ತಿರೋ ಮನೆಮದ್ದು ಮಾಡಿಯಾಯ್ತು.

ಮೂರು ತಿಂಗಳ ಬಾಣಂತನ ಮುಗಿಸಿ ಅತ್ತೆಮನೆಗೆ ಬಂದ ರಮ್ಯಾ.ಶೀತ ನೆಗಡಿ ಜಾಸ್ತಿಯಾಗಿ ಗಂಟಲುಬ್ಬಿ ಬರುತ್ತಿದ್ದು, ಆಸ್ಪತ್ರೆಹೋಗದೆ,ಗಂಡ,ಅತ್ತೆ ಉದಾಸೀನ'ತಂ'ಲ್ಲಿ ನರಳುತ್ತಿದ್ದಳು.,ಅತೀ ಶೀತ ಜಾಸ್ತಿಯಾಗಿ ಉಸಿರಾಟದ ತೊಂದರೆ ಆದಾಗ ಆಸ್ಪತ್ರೆಗೆ ಕರೆದುಕೊಂಡು ಹೋದರು.ಧೀರ್ಘ ತಪಾಸಣೆಯನಂತರ

ಡಾಕ್ಟರ್ ಹೇಳಿದ ಮಾತು ಇದ್ದವರನ್ನೆಲ್ಲಾ ಕಂಗೆಡಿಸಿತು. ಅವರು ಹೇಳಿದ್ದು... ಇವರಿಗೆ ಲಂಗ್ಸ್ ಕ್ಯಾನ್ಸರ್. ಆಗಲೇ ಮೂರನೆಯ ಹಂತ ದಾಟಿ ನಾಲ್ಕಕ್ಕೆ ಬಂದಿದೆಯೆಂದು.

"ತವರಿನಟ್ಟದಲಿ ಕನಸೆಲ್ಲ ಕಟ್ಟಿಟ್ಟು ನಿನ್ನೆಡೆಗೆ ಬಂದೆನು ಅಡಿಯ ನಿಟ್ಟು. ಕನಸು ನನಸಾಗದೆ ಮರಳುವೆನೇ ಬಾರದೂರಿಗೆ " ಎಂದು ಕಣ್ಣೀ–ರಿಟ್ಟಳು.ಜನಗಳ ಬಾಯಿಗೆ ಹೆದರಿ ರಮ್ಯಾಗೆ ಚಿಕಿತ್ಸೆ ಶುರು ಮಾಡಿದ ಗಂಡ ವರುಣ್.ಮತ್ತು ಮನೆಯವರು.

ಕೊನೆಯ ಹಂತದಲ್ಲಿರುವ ಈ ಮಹಾ ಮಾರಿಗೆ ಕಿಮೋಥೆರಪಿ ಗಾಗಿ ಅವಳ ತಲೆಯ ಕೂದಲನ್ನು ತೆಗೆದು ಬೋಳು ಮಾಡಿದಾಗ ರಮ್ಯಾ ಭೂಮಿ ಗಿಳಿದಳು.

" ಬಿಡುಗಡೆ ಬಯಸಿದೆ ಕಣ ಕಣವು ಮುಗಿದಿದೆ ದೊರೆ ನಮ್ಮ ಋಣವು. ಬಹುಕಾಲ ಬಾಳಿದೆನು ನೆರಳಾಗಿ ತುಸು ಕಾಲ ಬಾಳಲೇ ನನಗಾಗಿ?"ಮನಸಿನ ಈ ಭಾವನೆಗಳನ್ನು ಹತ್ತಿಕ್ಕಿ ಎಳೆಯ ಕಂದ ಇನ್ನೂ ಆರು ತಿಂಗಳ ಗಂಡು ಮಗುವಿಗಾಗಿ ಜೀವ ಬಿಗಿ ಹಿಡಿದಿದ್ದಳು.

ಮನೆಯವರೆಲ್ಲರಿಗೆ ಈಗ ಆ ಮಗುವೊಂದು ಸಾಕು, ರಮ್ಯಾ ಳಿಗಾಗಿ ಖರ್ಚು ಮಾಡುವುದು ವ್ಯರ್ಥ ಎಂಬ ತೀರ್ಮಾನಕ್ಕೆ ಬಂದು ಹವಾ ಬದಲಾವಣೆ ಗಾಗಿ ತಾಯಿಯ ಮನೆಗೆ ಹೋಗಲು ತಿಳಿಸಿದಾಗ, ಕಿಮೋಥೆರಪಿ ಗಾಗಿ ಮತ್ತೆ ಬರಲು ಕಷ್ಟವಾಗುತ್ತದೆ, ಆದ್ದರಿಂದ ನಾನು ಇಲ್ಲೇ ಇರುವೆ ನೆಂದರೂ,

"ಇಲ್ಲಾ ರಮ್ಯಾ.... ಡಾಕ್ಟರ್ ಹೇಳಿದ್ರು,ಇದಾಗಲೇ ಕೈ ಮೀರಿದೆ. ಕಿಮೋಥೆರಪಿ ಜಾಸ್ತಿ ಮಾಡಿದರೆ ನಿನಗೆ ತಡೆಯುವ ಶಕ್ತಿ ಇಲ್ಲ.ಒಂದೆರಡು ತಿಂಗಳು ಹವಆಬದಲಆವಣಎ ಆದರೆ ಸ್ವಲ್ಪ ಪರವಾಗಿಲ್ಲ ಎಂದರು.ಆದರೆ ನಾನು ದೂರ ಎಲ್ಲಿಗೂ ಕರೆದುಕೊಂಡು ಹೋಗುವ ಸ್ಥಿತಿ ಯಲ್ಲಿಲ್ಲ.ಸಾರಿ...

ಹೀಗಾಗಿ ಅಮ್ಮನ ಮನೆಗೆ ಹೋಗು, ಹಳ್ಳಿಯ ವಾತಾವರಣ ನಿನಗೆ ಖುಷಿಕೊಡುತ್ತೆ.. ಮಗುವನ್ನು ನಾವು ನೋಡಿಕೊಳ್ಳು ತ್ತೇವೆ,ನಿನಗೆ ಆ ಕಷ್ಟ ಬೇಡ ನೆಮ್ಮದಿ ಯಿಂದ ಇರು,"ಎಂದು ಅವನ ದೃಷ್ಟಿಯ ಎದುರಿಸಲಾಗದೆ ರಮ್ಯ ಮನದಲ್ಲೇ ಕಣ್ಣೀರಿಡುತ್ತಾ ಮಗುವನ್ನು ಬಿಟ್ಟು ತವರಿಗೆ ಹೊರಟಳು.

ತವರಿಗೆ ಬಂದ ಮಗಳನ್ನು ದಮಯಂತಿ ಪ್ರೀತಿ ವಿಶ್ವಾಸದಲ್ಲಿ ಸ್ವಾಗತಿಸಿ,ತಂದೆ ಇಲ್ಲದ ಮಗಳಿಗೆ ತಾನೇ ಅಪ್ಪ ಅಮ್ಮಎರಡೂ ಆಗಿ ಅದೇ ಹಳ್ಳಿಯಲ್ಲಿರುವ ಹೋಮಿಯೋಪತಿ ವೈದ್ಯ ನಾರಾಯಣ ರವರಲ್ಲಿ ಕರೆತಂದು. ನಾಡಿ ಡಾಕ್ಟರೆಂದೇ ಹೆಸರಾದ ನಾರಾಯಣ ರಮ್ಯಾಳನಾಡಿಪ–ರೀಕ್ಷೆಮಾಡಿ ,"ನೋಡೀಮ್ಮಾ,ಹೆದರುವಂತಹುದೇನಿಲ್ಲ, ಇದಕ್ಕೆ ನಾನು ಔಷಧಿ ಕೊಡುವೆ , ನಂಬಿಕೆ ಇಟ್ಟು ಒಂದಾರು ತಿಂಗಳು ನಾ ಹೇಳಿದಂತೆ ಕೇಳಿ.ಇದನ್ನು ನಾ ಪೂರ್ತಿ ವಾಸಿ ಮಾಡುವೆ."



"ಬೆಂಗಳೂರಿನ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಇದು ವಾಸಿಯಾಗು ವುದಿಲ್ಲ. ಇದಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿದರೆ ಕೆಲವು ವರ್ಷಗಳ ಕಾಲ ಇರಬಹುದೆಂದು... ಹೇಳಿದರು.

ಖರ್ಚು ಮಾಡಲಾಗದೆ ಮನೆಯವರು ಇಲ್ಲಿಗೆ ಕಳಿಸಿದರು. ನಿಮ್ಮನ್ನು ನಂಬಿ ಬಂದಿರುವೆ.. ದಯವಿಟ್ಟು ನನ್ನ ಮಗುವಿಗಾಗಿ ಉಳಿಸಿ."

"ನೋಡಮ್ಮ ರಮ್ಯಾ,ನೀ ನನ್ನ ಮಗಳ ಸಮಾನ ವಿದ್ದಿಯಾ

ನಿನ್ನನ್ನು ಹುಷಾರು ಮಾಡುವ ಜವಾಬ್ದಾರಿ ನನ್ನದು.ಕೆಲವು ಆಸ್ಪತ್ರೆಗಳು ದುಡ್ಡು ಮಾಡುವುದೇ ದಂಧೆ ಯಾಗಿ ಇಂತಹ ಹೆದರುವ ರೋಗಿಗಳಿಂದ ನಿರ್ದಾಕ್ಷಿಣ್ಯವಾಗಿ ದುಡ್ಡು ಮಾಡ ಲು ಕೂತಿರ್ತಾರೆ. ಅವರೂ ಬೆಳೆಯಬೇಕು,ಮಹಡಿ ಮೇಲೆ ಮಹಡಿ ಆಸ್ಪತ್ರೆ,ಅವರ ಮನೆ ಕಟ್ಟಬೇಕಲ್ವಾ.... ಅದಕ್ಕೆ ."

ಅವರ ಮಾತಿನ ಮೇಲೆ ನಂಬಿಕೆ ಇಟ್ಟು ಅವರು ಹೇಳಿದಂತೆಯೇ ಕೇಳಿ ಔಷಧಿ ಪಥ್ಯ ದಿಂದ ನಿಜವಾಗಿಯೂ ಆರೋಗ್ಯ ವಂತಳಾಗಿ, ತಲೆಯಲ್ಲಿ ಕೂದಲೂ ಬೆಳೆದು ಖಳಖಳೆ ಯಾಗಿ ನಳನಳಿಸುತ್ತಿದ್ದಳು.

ಇವಳ ಆರೋಗ್ಯದ ಸುದ್ದಿ ಕೇಳಿ ಬಂದ ಪತಿರಾಯ ವರುಣನ ಕಂಡ ರಮ್ಯಾ" ಕಣ್ಣಂಚ ಕಂಬನಿ ಅಲ್ಲಲ್ಲೇ ಒರೆಸಿ ಬಾರದ ನಗುವ ತುಟಿಯೊಳಿರಿಸಿ ,ನೀ ಕುಣಿಸಿದಂತೆ ಕುಣಿದೆನು ನಲ್ಲ ಥೈ ಥೈ ತಕ ಥೈ..."

"ಅಂದಿನಿಂದ ಬಾರದೇ ಇಂದು ಬಂದಿರಿ ನೀವು.ಕುಣಿವ ಹೆಜ್ಜೆಯು ಸೋತಿಹುದು ತೊಟ್ಟ ಗೆಜ್ಜೆಯೂ ಸವೆದಿಹುದು" ನಾನು ಮತ್ತೆಮತ್ತೆ ಆರೋಗ್ಯ ಕೆಟ್ಟರೆ ಮತ್ತೆಲ್ಲಿ ಕಳಿಸುವಿರಿ ಪತಿರಾಯ. ಸೋತಿಹಳು ಅಮ್ಮ,ಎಲ್ಲಾ ತರಹದಿ."

"ನಾನಲ್ಲಿ ಬರಲಾರೆ.ನಾನಿಲ್ಲದೆಯೂ ನನ್ನ ಮಗ ಚೆನ್ನಾಗಿ ರುವ. ನನ್ನ ನೆನಪು ಬಾರದಂತೆ ಬೆಳೆಸಿರುವಿರಿ .ಎಲ್ಲಾದರೂ ಅವ ಸುಖವಾಗಿರಲಿ.ನಾನು ಇಲ್ಲಿಯೇ ಈ ಹಳ್ಳಿಯಲ್ಲಿಯೇ ನಾಲ್ಕಾರು ಜನಗಳಿಗೆ ಉಪಕಾರಿ ಯಾಗುವಂತೆ ಬದುಕುವೆ. ದಯವಿಟ್ಟು ಕ್ಷಮಿಸಿ.ಕರೆದೊಯ್ಯುವ ಮಾತನಾಡಬೇಡಿ"

"ರಮ್ಯಾ ... ಸಾಕಷ್ಟು ಸಿರಿತನ ವಿದ್ದರೂ ನಿನ್ನ ವಿಷಯದಲ್ಲಿ ಬಡವನಾದೆ. ಬೇರೆ ಕಡೆ ಔಷಧಿ ಕೊಡಿಸುವ ಯೋಚನೆಯನ್ನೂ ಮಾಡಲಿಲ್ಲ.ಈ ದಿನ ಪಶ್ಚಾತ್ತಾಪ ಪಡುವೆನು . ಆದರೆ ಪ್ರಯೋಜನವೇನು.?ಈದಿನ ನನ್ನ ಕಣ್ತೆರಸಿದ ನಿನಗೆ ನಾ ಆಭಾರಿ.ನಿನ್ನನ್ನು ನಿನ್ನಿಷ್ಟ ಕ್ಕೆ ಬಿಡುವೆನು.ಯಾವಾಗ ಬಂದರೂ ನಿನ್ನ ಮನೆ ,ನನ್ನ ಮನದ ಬಾಗಿಲು ನಿನಗಾಗಿ ತೆರೆದಿರುತ್ತದೆ. ನಾನಿನ್ನು ಬರುವೆ."

ಕ್ಯಾನ್ಸರ್ ಎಂದೂ ವಾಸಿಯಾಗದ ಕಾಯಿಲೆ ಅಲ್ಲ.ನಮ್ಮ ದಿನನಿತ್ಯದ ಆಹಾರ,ಜೀವನ ಶೈಲಿ,ಬದುಕುವ ಕ್ರಮದಿಂದ ಖಂಡಿತವಾಗಿಯೂ ಕ್ಯಾನ್ಸರ್ ಮುಕ್ತ ದೇಹ ವನ್ನಾಗಿ ಮಾಡಬಹುದೆಂದು ರಮ್ಯಾ ಸಾಧಿಸಿ ತೋರಿಸಿದಳು.

